KABI010026992024

Presented on : 23-07-2024
Registered on : 23-07-2024
Decided on : 18-09-2025
Duration : 01 Year, 01 Month & 26 Days

# **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಹಾಗೂ ವಿಶೇಷ ನ್ಯಾಯಾಲಯ, ಬಳ್ಳಾರಿ.**

-: ಉಪಸ್ಥಿತರು:-

**ಶ್ರೀಮತಿ ಕೆ.ಜಿ.ಶಾಂತಿ**, ಬಿ.ಕಾಂ., ಎಲ್‌ಎಲ್.ಎಂ.,
ಪ್ರಧಾನ ಜಿಲ್ಲಾ ಮತ್ತು ಸತ್ರ ಹಾಗೂ ವಿಶೇಷ ನ್ಯಾಯಾಧೀಶರು
ಬಳ್ಳಾರಿ.

ದಿನಾಂಕ: 18 ನೇ ದಿವಸ ಸೆಪ್ಟೆಂಬರ್ ಮಾಹೆಯ 2025 ನೇ ಇಸವಿಯಂದು.

## **ವಿಶೇಷ ಮೊಕದ್ದಮೆ ಸಂಖ್ಯೆ: 749/2024**

**ಫಿರ್ಯಾದುದಾರರು:--**

ಕರ್ನಾಟಕ ಸರಕಾರದ ಪರವಾಗಿ
ಆರಕ್ಷಕ ಉಪ-ನಿರೀಕ್ಷಕರು, ರೈಲ್ವೇ ಆರಕ್ಷಕ ಠಾಣೆ,
ಬಳ್ಳಾರಿ- 583 101.

**(ಮಾನ್ಯ ಸರಕಾರಿ ಅಭಿಯೋಜಕರ ಮೂಲಕ ಪ್ರತಿನಿಧಿಸಿರುತ್ತಾರೆ.)**

**-ವಿರುದ್ಧ-**

**ಆರೋಪಿತರು:-**

ಕರುಣಂ ರಘುಶಂಕರ್, ತಂದೆ. ಕೆ. ಠ್ಯಾಗೋರ್,
ವಯಸ್ಸು 35 ವರ್ಷ,
ವಾಸಃ ಮನೆ ನಂಬರ್ 17/15, ತಿಲಕ್ ನಗರ,
ಗುಂತಕಲ್, ಅನಂತಪುರ ಜಿಲ್ಲೆ,
ಆಂಧ್ರ ಪ್ರದೇಶ ರಾಜ್ಯ.

**( ಆರೋಪಿತನು ಶ್ರೀ ರಾಮಣ್ಣ ಕೆ., ವಕೀಲರ ಮೂಲಕ, ಪ್ರತಿನಿಧಿಸಿರುತ್ತಾರೆ.)**

-

## ಪ್ರಕರಣದ ಘಟನಾವಳಿಗಳ ವಿವರ

| | | | |
|---|---|---|---|
| 1. | ಘಟನೆ ನಡೆದ ದಿನಾಂಕ | : | 28/04/2024 |
| 2. | ಘಟನೆ ವರದಿಯಾದ ದಿನಾಂಕ | : | 28/04/2024 |
| 3. | ಆಪಾದಿತನನ್ನು ದಸ್ತಗಿರಿ ಮಾಡಿದ ದಿನಾಂಕ | : | 28/04/2024 |
| 4. | ಆಪಾದಿತನು ನ್ಯಾಯಾಂಗ ಬಂಧನದಿಂದ ಬಿಡುಗಡೆಯಾದ ದಿನಾಂಕ | : | 10/07/2024 |
| 5. | ಫಿರ್ಯಾದಿಯ ಹೆಸರು | : | ಶ್ರೀ ಕರಿಯಣ್ಣ ಕೆ.ಎನ್., ಮುಖ್ಯ ಪೇದೆ-248, ರೈಲ್ವೇ ಆರಕ್ಷಕ ಠಾಣೆ, ಬಳ್ಳಾರಿ |
| 6. | ಆಪಾದನೆಯ ಸ್ವರೂಪ | : | ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 20(b)(ii)(B) |
| 7. | ವಿಚಾರಣೆ ಪ್ರಾರಂಭವಾದ ದಿನಾಂಕ | : | 21/07/2025 |
| 8. | ವಿಚಾರಣೆ ಮುಕ್ತಾಯವಾದ ದಿನಾಂಕ | : | 23/08/2025 |
| 9. | ತೀರ್ಪು ಪ್ರಕಟವಾದ ದಿನಾಂಕ | : | 18/09/2025 |
| 10. | ನ್ಯಾಯಾಧೀಶರ ಅಭಿಪ್ರಾಯ | : | ಆರೋಪಿತನನ್ನು ನಿರ್ದೋಷಿಯೆಂದು ತೀರ್ಮಾನಿಸಿ, ಖುಲಾಸೆಗೊಳಿಸಲಾಗಿದೆ. |
| 11. | ಪ್ರಕರಣದ ಕಾಲಾವಧಿ | : | ವರ್ಷ 01, ತಿಂಗಳು 01, ದಿನ 26 |

-----

K G SHANTHI

Digitally signed by K G SHANTHI
Location: PRINCIPAL DISTRICT AND SESSIONS JUDGE,BALLARI
Date: 2025.09.18 17:24:09 +0530

## ತೀರ್ಪು

ಆರಕ್ಷಕ ಉಪ ನಿರೀಕ್ಷಕರು, ರೈಲ್ವೇ ಆರಕ್ಷಕ ಠಾಣೆ, ಬಳ್ಳಾರಿ ಇವರು ಆರೋಪಿತನು ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 20(b)(ii)(B) ರಡಿಯಲ್ಲಿ ಅಪರಾಧ ಎಸಗಿದ್ದಾನೆಂದು ಆರೋಪಿಸಿ, ಈ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನಾ ಪಕ್ಷದ ಮೊಕದ್ದಮೆಯ ಸಾರಾಂಶ ಈ ಕೆಳಕಾಣಿಸಿದಂತಿದೆಃ-

2024 ರ ಲೋಕಸಭಾ ಚುನಾವಣೆ ನಿಮಿತ್ತ ಫಿರ್ಯಾದುದಾರರಾದ ಕರಿಯಣ್ಣ ಕೆ.ಎನ್., ಆರ್.ಹೆಚ್.ಸಿ- 248, ಬಳ್ಳಾರಿ ರೈಲ್ವೇ ಆರಕ್ಷಕ ಠಾಣೆ, ಬಳ್ಳಾರಿ ಇವರಿಗೆ ಆರ್.ಪಿ.ಎಫ್. ಸಿಬ್ಬಂದಿಗಳೊಂದಿಗೆ ಮೇಲಾಧಿಕಾರಿಯವರ ಸೂಚನೆ ಮೇರೆಗೆ ದಿನಾಂಕ 28/04/2024 ರಂದು ರೈಲುಗಾಡಿಗಳಲ್ಲಿ ಕಳ್ಳ ಸಾಗಾಣಿಕೆ ಮಾಡಿಕೊಂಡು ಬರುವ ಗಾಂಜಾ ಮತ್ತು ಇತರೆ ವಸ್ತುಗಳನ್ನು ನಿಗಾವಣೆ ಮಾಡುವಂತೆ ಮುದಿಯಪ್ಪ, ಆರಕ್ಷಕ ಉಪ-ನಿರೀಕ್ಷಕರು ಇವರು ಕಳುಹಿಸಿರುತ್ತಾರೆ. ಅದರಂತೆ ಫಿರ್ಯಾದುದಾರರು ದಿನಾಂಕ 28/04/2024 ರಂದು ಬಳ್ಳಾರಿಯ ಆರ್.ಪಿ.ಎಫ್. ಸಿಬ್ಬಂದಿಗಳಾದ ಡಿ.ಸಿ. ರಾಠೋಡ್, ಎಎಸ್ಐ, ಎಸ್.ಎಂ. ರಫೀ, ಪಿಸಿ- 263, ಎಸ್.ಸಿ. ಯಾದವ್, ಪಿಸಿ-514, ಸಂಧೀಪ್ ನಗರ್, ಪಿಸಿ-443/ರೈಲ್ವೇ ರಕ್ಷಣಾ ದಳ ಇವರುಗಳೊಂದಿಗೆ ಗುಂತಕಲ್ ರೈಲ್ವೇ ನಿಲ್ದಾಣಕ್ಕೆ ಹೋಗಿದ್ದು, ಗುಂತಕಲ್ ರೈಲು ನಿಲ್ದಾಣಕ್ಕೆ ಬಂದ ರೈಲುಗಾಡಿ ಸಂಖ್ಯೆ 16592 ಹಂಪಿ ಎಕ್ಸ್ ಪ್ರೆಸ್ ರೈಲುಗಾಡಿಯಲ್ಲಿ ಗುಂತಕಲ್ ರೈಲ್ವೇ ನಿಲ್ದಾಣದಿಂದ ಬಳ್ಳಾರಿ ರೈಲ್ವೇ ನಿಲ್ದಾಣಕ್ಕೆ ಬರುವ ರೈಲುಗಾಡಿಯಲ್ಲಿ ಅನುಮಾನಾಸ್ಪದ ವ್ಯಕ್ತಿಗಳು ಮತ್ತು ವಸ್ತುಗಳ ನಿಗಾವಣೆ ಮಾಡಿಕೊಂಡು ಗುಂತಕಲ್ ರೈಲ್ವೇ ನಿಲ್ದಾಣದಿಂದ ಬಳ್ಳಾರಿ ರೈಲ್ವೇ ನಿಲ್ದಾಣದ ವರೆಗೆ ವಿಶೇಷ ಡ್ರೈವ್ ಮಾಡಿಕೊಂಡು ಬರುವಾಗ ರೈಲಗಾಡಿಯು ಬಳ್ಳಾರಿ ರೈಲ್ವೇ

ನಿಲ್ದಾಣವನ್ನು ಸುಮಾರು ಬೆಳಿಗ್ಗೆ 05-40 ಗಂಟೆಗೆ ತಲುಪುತ್ತಿರುವಾಗ್ಗೆ ಜನರಲ್ ಕೋಚ್ ನಲ್ಲಿ ನಿಗಾವಣೆ ಮಾಡುತ್ತಿರುವಾಗ್ಗೆ ಒಂದು ಆಕಾಶ ನೀಲಿ ಮತ್ತು ಕಪ್ಪು ಬಣ್ಣದ ಬ್ಯಾಗ್ ಪಾಕನ್ನು ಒಬ್ಬ ವ್ಯಕ್ತಿ ಹಿಡಿದುಕೊಂಡು ಕುಳಿತುಕೊಂಡಿದ್ದು, ಅವರು ಸದರಿ ಅಸಾಮಿಯನ್ನು ವಿಚಾರ ಮಾಡಲಾಗಿ ಮತ್ತು ಬ್ಯಾಗಿನಲ್ಲಿ ಏನಿದೆ ಎಂದು ಕೇಳಿದಾಗ, ಆತನು ಗಾಬರಿಗೊಂಡು ಬ್ಯಾಗನ್ನು ತೆರೆದು ತೋರಿಸಲು ತಡವರಿಸಿದನು. ನಂತರ ಅವರು ಬ್ಯಾಗ್ ನಲ್ಲಿ ಏನಿದೆ ಎಂದು ಕೇಳಿದಾಗ, ಸದರಿ ವ್ಯಕ್ತಿಯು ಬ್ಯಾಗನ್ನು ತೆರೆದು ತೋರಿಸಿದಾಗ, ಸದರಿ ಬ್ಯಾಗ್ ನಲ್ಲಿ ಖಾಕಿ ಬಣ್ಣದ ಸೆಲ್ಲೋ ಟೇಪ್‌ನಿಂದ ಸುತ್ತಿದ 06 ಬಂಡಲ್‌ಗಳಿದ್ದು, ಅದರಲ್ಲಿ ಗಾಂಜಾವಿರುವುದು ಕಂಡುಬಂದಿರುತ್ತದೆ. ಸದರಿ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಕೇಳಿದಾಗ, ಆತನು ಕರಣಂ ರಘುಶಂಕರ, ತಂದೆ. ಕೆ. ಟ್ಯಾಗೋರ್, ಗುಂತಕಲ್ ಎಂದು ತಿಳಿಸಿರುತ್ತಾನೆ. ನಂತರ ಆರೋಪಿತನನ್ನು ಬ್ಯಾಗ್ ಸಮೇತ ಮುಂದಿನ ಕ್ರಮವಾಗಿ ಅವರು ಬಳ್ಳಾರಿ ರೈಲ್ವೇ ಆರಕ್ಷಕ ಠಾಣೆಗೆ ಕರೆ ತಂದು, ಠಾಣೆಯಲ್ಲಿದ್ದ ಚಾಸಾ- 17 ಶ್ರೀ ಕೆ. ಶಿವಮೂರ್ತಿ, ಸಹಾಯಕ ಆರಕ್ಷಕ ಉಪ-ನಿರೀಕ್ಷಕರು ಇವರ ಸಮಕ್ಷಮ ಹಾಜರುಪಡಿಸಿದರು.

3. ನಂತರ ಚಾಸಾ- 17 ಇವರು ಮೇಲಾಧಿಕಾರಿಯವರಿಗೆ ವಿಷಯ ತಿಳಿಸಿ, ಸೂಚನೆಗಳನ್ನು ಪಡೆದುಕೊಂಡು, ಆರೋಪಿತನನ್ನು ಗಾಂಜಾದ ಬಗ್ಗೆ ವಿಚಾರಿಸಿದಾಗ, ಆತನು ಸದರಿ ಗಾಂಜಾವನ್ನು ಓಡಿಸ್ಸಾ ರಾಜ್ಯದ ಭುವನೇಶ್ವರದಿಂದ ಅಪರಿಚಿತನಿಂದ ಖರೀದಿ ಮಾಡಿ, ಆತನ ಊರಾದ ಆಂಧ್ರಪ್ರದೇಶದ ಗುಂತಕಲ್‌ನ ತಿಲಕ್ ನಗರಕ್ಕೆ ಹೋಗಿ ತಿಲಕ್ ನಗರದಲ್ಲಿ ಸಣ್ಣ ಸಣ್ಣ ಪ್ಯಾಕೇಟ್‌ಗಳನ್ನು ಮಾಡಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಹಣ ಸಂಪಾದನೆ ಮಾಡುವ ಸಲುವಾಗಿ ತಂದಿರುವುದಾಗಿ ತಿಳಿಸಿರುತ್ತಾನೆ. ನಂತರ ಚಾಸಾ- 17 ಇವರು ಠಾಣೆಗೆ ಇಬ್ಬರು ಪಂಚರನ್ನು ಬರಮಾಡಿಕೊಂಡು, ಅವರಿಗೆ ವಿಷಯ ತಿಳಿಸಿ ಪಂಚರಾಗಲು ನೋಟೀಸು

ನೀಡಿ, ಪಂಚರ ಸಮಕ್ಷಮ ಸದರಿ ಆಕಾಶ ನೀಲಿ ಮತ್ತು ಕಪ್ಪು ಬಣ್ಣದ ಬ್ಯಾಕ್ ಪ್ಯಾಕ್ ನಲ್ಲಿ ಖಾಕಿ ಬಣ್ಣದ ಸೆಲ್ಲೋ ಟೇಪ್ ಸುತ್ತಿದ ಒಟ್ಟು 06 ಬಂಡಲ್ ಗಳನ್ನು ತೆರೆದು ನೋಡಿದಾಗ ಹಸಿಯಾಗಿರುವ ಗಾಂಜಾದ ಎಲೆ ಬೀಜಗಳಿಂದ ಕೂಡಿದ ಗಾಂಜಾ ಇರುವುದು ಕಂಡುಬಂದಿರುತ್ತದೆ. ಅವುಗಳನ್ನು ಒಂದೊಂದಾಗಿ ತೆರೆದು ತೂಕ ಮಾಡಿ ನೋಡಿದಾಗ 1 ನೇ ಬಂಡಲ್‌ನ ಬ್ಯಾಗ್ ನಲ್ಲಿ 1 ಕೆಜಿ 70 ಗ್ರಾಂ, 2 ನೇ ಬಂಡಲ್ ನ ಬ್ಯಾಗ್ ನಲ್ಲಿ 1 ಕೆಜಿ, 120 ಗ್ರಾಂ, 3 ನೇ ಬಂಡಲ್‌ನ ಬ್ಯಾಗ್‌ನಲ್ಲಿ 1 ಕೆಜಿ 10 ಗ್ರಾಂ, 4 ನೇ ಬಂಡಲ್‌ನ ಬ್ಯಾಗ್‌ನಲ್ಲಿ 990 ಗ್ರಾಂ, 5 ನೇ ಬಂಡಲ್‌ನ ಬ್ಯಾಗ್‌ನಲ್ಲಿ 1 ಕೆಜಿ 70 ಗ್ರಾಂ ಮತ್ತು 6 ನೇ ಬಂಡಲ್‌ನ ಬ್ಯಾಗ್‌ನಲ್ಲಿ 960 ಗ್ರಾಂ ಗಾಂಜಾ ಇರುವುದು ಕಂಡುಬಂದಿರುತ್ತದೆ ಮತ್ತು ಅವುಗಳಿಗೆ ಕ್ರಮಸಂಖ್ಯೆ 1 ರಿಂದ 6 ಎಂದು ನಮೂದಿಸಲಾಗಿರುತ್ತದೆ.  ನಂತರ ಸದರಿ ಗಾಂಜಾವನ್ನು ಬಿಳಿ ಬಟ್ಟೆಯ ಬ್ಯಾಗ್‌ನಲ್ಲಿ ಹಾಕಿ, ತುದಿಯನ್ನು ದಾರದಲ್ಲಿ ಕಟ್ಟಿ ಕೆಂಪು ಅರಗು ಹಾಕಿ ಎಸ್.ಹೆಚ್.ಓ. ಎಂದು ಸೀಲ್ ಮಾಡಲಾಗಿರುತ್ತದೆ.  ಒಟ್ಟು ಗಾಂಜಾದ ತೂಕ 06 ಕೆಜಿ 220 ಗ್ರಾಂ ಆಗಿದ್ದು, ಒಟ್ಟು ಅಂದಾಜು ಬೆಲೆ ₹6,22,000/- ಗಳಾಗಿರುತ್ತವೆ.  ನಂತರ ಸದರಿ ಗಾಂಜಾವನ್ನು ಪಂಚರ ಸಮಕ್ಷಮ ಪಂಚನಾಮೆ ಮುಖೇನ ಜಪ್ತುಪಡಿಸಿಕೊಳ್ಳಲಾಗಿರುತ್ತದೆ.

4. ತದ ನಂತರ ಆಕಾಶ್ ನೀಲಿ ಮತ್ತು ಕಪ್ಪು ಬಣ್ಣದ ಬ್ಯಾಗ್ ಪ್ಯಾಕ್‌ನ ಮುಂದಿನ ಜಿಪ್ ನಲ್ಲಿದ್ದ ಎರಡು ಮೊಬೈಲು ಫೋನ್ ಅಂದರೆ ಕಪ್ಪು ಬಣ್ಣದ ಎಂ.ಐ. ರೆಡ್ಮಿ ಕಂಪನಿಯ ಮೊಬೈಲ್ ಮತ್ತು ಗೋಲ್ಡ್ ಕಲರಿನ ಒಪ್ಪೋ ಕಂಪನಿಯ ಮೊಬೈಲ್ ಮತ್ತು ಒಂದು ರೈಲ್ವೇ ಜನರಲ್ ಟಿಕೇಟ್ ಇದ್ದು, ಇವುಗಳನ್ನು ಸಹ ಜಪ್ತುಪಡಿಸಿಕೊಳ್ಳಲಾಗಿರುತ್ತದೆ.  ನಂತರ ಚಾಸಾ- 1 ಇವರು ಆರೋಪಿತನ ವಿರುದ್ಧ ಮುಂದಿನ ಕ್ರಮ ಕೈಗೊಳ್ಳಲು ದೂರು/ವರದಿಯನ್ನು ನೀಡಿರುತ್ತಾರೆ.

5. ಚಾಸಾ- 17 ಇವರು ಚಾಸಾ- 1 ಇವರು ನೀಡಿದ ಫಿರ್ಯಾದನ್ನು ಸ್ವೀಕರಿಸಿ, ಸದರಿ ಫಿರ್ಯಾದಿನ ಆಧಾರದ ಮೇರೆಗೆ ಠಾಣಾ ಅಪರಾಧ ಸಂಖ್ಯೆ 13/2024 ರಲ್ಲಿ ಪ್ರಕರಣವನ್ನು ನೋಂದಾಯಿಸಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಚಾಸಾ- 1 ಇವರು ಆರೋಪಿತನೊಂದಿಗೆ ಹಾಜರುಪಡಿಸಿದ ಆಕಾಶ ನೀಲಿ ಬಣ್ಣದ ಬ್ಯಾಗನಲ್ಲಿದ್ದ 6 ಬಂಡಲ್ ಗಾಂಜಾವನ್ನು, ಎರಡು ಮೊಬೈಲ್ ಫೋನ್‌ಗಳು, 1 ರೈಲ್ವೇ ಟಿಕೇಟ್‌ನ್ನು ಪಂಚರ ಸಮಕ್ಷಮ ಪಂಚನಾಮೆ ಮೂಲಕ ಚಾಸಾ- 17 ಇವರು ವಶಪಡಿಸಿಕೊಂಡಿರುತ್ತಾರೆ. ನಂತರ ಆರೋಪಿತನ ಸ್ವಇಚ್ಛಾ ಹೇಳಿಕೆ ಪಡೆದುಕೊಂಡು, ನ್ಯಾಯಾಲಯದ ಸಮಕ್ಷಮ ಆರೋಪಿತನನ್ನು ಹಾಜರುಪಡಿಸಿರುತ್ತಾರೆ. ಮುಂದಿನ ತನಿಖೆಯನ್ನು ಚಾಸಾ- 17 ಇವರು ಚಾಸಾ- 18 ಇವರಿಗೆ ವಹಿಸಿಕೊಟ್ಟಿರುತ್ತಾರೆ.

6. ದಿನಾಂಕ 29/04/2024 ರಂದು ಚಾಸಾ- 18 ಇವರು ಚಾಸಾ- 17 ಇವರಿಂದ ಕಡತವನ್ನು ಪಡೆದುಕೊಂಡು ಆರ್.ಪಿ.ಸಿ.-290 ಶ್ಯಾಂ ಸುಂದರ್ ಇವರಿಂದ ಛಾಯಾಚಿತ್ರಗಳನ್ನು ಪಡೆದುಕೊಂಡು ಅವರ ಹೇಳಿಕೆ ಪಡೆದು, ಭಾರತೀಯ ಸಾಕ್ಷ್ಯಾಧಿನಿಯಮದ ಕಲಂ 65-ಬಿ ರಡಿಯಲ್ಲಿ ದೃಢೀಕರಣ ಪತ್ರವನ್ನು ಪಡೆದುಕೊಂಡಿರುತ್ತಾರೆ. ದಿನಾಂಕ 30/04/2024 ರಂದು ರೈಲು ಗಾಡಿ ಸಂಖ್ಯೆ 16592 ಹಂಪಿ ಎಕ್ಸ್ ಪ್ರೆಸ್ ರೈಲು ಗಾಡಿಯು ಬಳ್ಳಾರಿ ರೈಲ್ವೇ ನಿಲ್ದಾಣಕ್ಕೆ ಬಂದ ಸಮಯದ ನಿಖರತೆ ತಿಳಿಯುವ ಸಲುವಾಗಿ ಸ್ಟೇಷನ್ ಮಾಸ್ಟರ್ ಇವರಿಗೆ ಪತ್ರ ಬರೆದಿರುತ್ತಾರೆ ಮತ್ತು ಸದರಿ ಸ್ಟೇಷನ್ ಮಾಸ್ಟರ್ ಇವರು ಹಂಪಿ ಎಕ್ಸ್ ಪ್ರೆಸ್ ರೈಲು ಗಾಡಿಯು ಬಳ್ಳಾರಿ ರೈಲು ನಿಲ್ದಾಣಕ್ಕೆ ಬಂದ ಸಮಯವನ್ನು ನಮೂದಿಸಿರುತ್ತಾರೆ.

7. ಚಾಸಾ- 18 ಇವರು ದಿನಾಂಕ 01/05/2024 ರಂದು ಫಿರ್ಯಾದುದಾರರ ಮರು ಹೇಳಿಕೆ ಮತ್ತು ಪಂಚರನ್ನು ಕರೆದುಕೊಂಡು ಬಂದ ಸಿಬ್ಬಂದಿಗಳ ಹೇಳಿಕೆ ಪಡೆದುಕೊಂಡಿರುತ್ತಾರೆ. ದಿನಾಂಕ 02/05/2024 ರಂದು ಮಧ್ಯಾನ್ಹ 12-10 ರಿಂದ 01-10 ಗಂಟೆಯವರೆಗೆ ತಹಶೀಲ್ದಾರ್ ಇವರ ಸಮಕ್ಷಮ ಪಂಚರಾದ ಕೀರಲಿಂಗ ಮತ್ತು ಖಾಸೀಂ ಇವರ ಸಮಕ್ಷಮ ಜಪ್ತುಪಡಿಸಿಕೊಂಡ ಗಾಂಜಾದ ಇನ್ವೆಂಟರಿ ಕ್ರಮ ಜರುಗಿಸಲಾಗಿರುತ್ತದೆ. ದಿನಾಂಕ 03/05/2024 ರಂದು ಠಾಣಾ ಸಿಬ್ಬಂದಿಗಳಾದ ಮುತ್ತಪ್ಪ ಮತ್ತು ಕಲಪ್ಪ ಇವರ ಹೇಳಿಕೆ ಪಡೆದುಕೊಂಡು, ಸಾಕ್ಷಿ ಕಲ್ಲಪ್ಪ ಇವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65-ಬಿ ರಡಿಯಲ್ಲಿ ದೃಢೀಕರಣ ಪತ್ರವನ್ನು ಪಡೆದುಕೊಂಡಿರುತ್ತಾರೆ. ದಿನಾಂಕ 11/05/2024 ರಂದು ಎಎಸ್ಐ- ಡಿ.ಸಿ. ರಾಠೋಡ್, ಸಂದೀಪ್ ಮತ್ತು ರಫೀಕ್ ಇವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ.

8. ದಿನಾಂಕ 08/05/2024 ರಂದು ಠಾಣಾ ಸಿಬ್ಬಂದಿಯಾದ ಆರ್.ಪಿ.ಸಿ.- 540 ಮಂಜುನಾಥ ಇವರ ಮುಖಾಂತರ ಇನ್ವೆಂಟರಿ ಕಾಲಕ್ಕೆ ತೆಗೆದಿರಿಸಿದ ಮಾದರಿ ಗಾಂಜಾವನ್ನು ಪ್ರಾದೇಶಿಕ ವಿಧಿ ವಿಜ್ಞಾನ ಕೇಂದ್ರ, ಕಲಬುರಗಿಗೆ ಕಳುಹಿಸಿಕೊಟ್ಟಿರುತ್ತಾರೆ. ದಿನಾಂಕ 15/06/2024 ರಂದು ಈ ಪ್ರಕರಣದಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯನ್ನು ಬಾಕಿ ಇಟ್ಟು, ನ್ಯಾಯಾಲಯಕ್ಕೆ ಆರೋಪಿತನ ವಿರುದ್ಧ ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 20(b)(ii)(B) ರಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ನಂತರದಲ್ಲಿ, ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

9. ದೋಷಾರೋಪಣಾ ಪಟ್ಟಿಯಲ್ಲಿ ಒಟ್ಟು 18 ವ್ಯಕ್ತಿಗಳನ್ನು ಸಾಕ್ಷಿದಾರರು ಎಂದು ಉಲ್ಲೇಖಿಸಿರುತ್ತಾರೆ. ಚಾಸಾ- 1 ಇವರು ಈ ಪ್ರಕರಣದ ಫಿರ್ಯಾದುದಾರರು, ಚಾಸಾ- 2 ಮತ್ತು 3 ಇವರು ಜಪ್ತು ಪಂಚನಾಮೆ ಸಾಕ್ಷಿದಾರರು, ಚಾಸಾ- 4 ಮತ್ತು 5 ಇವರು ಇನ್ವೆಂಟರಿ ಪಂಚನಾಮೆಯ ಪಂಚಸಾಕ್ಷಿದಾರರು, ಚಾಸಾ- 6 ರಿಂದ 9 ಇವರು ಈ ಪ್ರಕರಣದಲ್ಲಿ ದಾಳಿ ಸಮಯ ಹಾಜರಿದ್ದ ಆರಕ್ಷಕ ಸಿಬ್ಬಂದಿಗಳು, ಚಾಸಾ- 10 ಇವರು ತನಿಖಾ ಸಹಾಯಕರು, ಚಾಸಾ- 11 ಇವರು ಪಂಚರಿಗೆ ನೋಟೀಸು ಜ್ಯಾರಿ ಮಾಡಿ ಠಾಣೆಗೆ ಕರೆದುಕೊಂಡ ಬಂದ ಮತ್ತು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕೊಟ್ಟು ಬಂದ ಆರಕ್ಷಕ ಸಿಬ್ಬಂದಿ, ಚಾಸಾ- 12 ಇವರು ಗಾಂಜಾವನ್ನು ಜಪ್ತುಪಂಚನಾಮೆ ಮೂಲಕ ಜಪ್ತುಪಡಿಸಿಕೊಂಡ ಸಮಯ ಛಾಯಾಚಿತ್ರ ತೆಗೆದವರು, ಚಾಸಾ- 13 ಇವರು ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಗಾಂಜಾವನ್ನು ಇನ್ವೆಂಟರಿ ಮಾಡಿದ ಸಮಯ ಗಾಂಜಾವನ್ನು ತೂಕಮಾಡಿದವರು, ಚಾಸಾ- 14 ಇವರು ಇನ್ವೆಂಟರಿ ಪಂಚನಾಮೆ ಕಾಲಕ್ಕೆ ಛಾಯಾಚಿತ್ರ ತೆಗೆದವರು, ಚಾಸಾ- 15 ಇವರು ಮಾದರಿಗಾಗಿ ತೆಗೆದಿರಿಸಿದ ಗಾಂಜಾವನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕೊಟ್ಟ ಬಂದ ಆರಕ್ಷಕ ಸಿಬ್ಬಂದಿ, ಚಾಸಾ- 16 ಇವರು ಜಪ್ತುಪಡಿಸಿಕೊಂಡ ಗಾಂಜಾದ ಇನ್ವೆಂಟರಿ ಕ್ರಮ ಜರುಗಿಸಿದ ತಹಶೀಲ್ದಾರ್, ಚಾಸಾ- 17 ಇವರು ಆರೋಪಿತನಿಂದ ಗಾಂಜಾವನ್ನು ವಶಪಡಿಸಿಕೊಂಡು ಜಪ್ತುಪಂಚನಾಮೆ ಜರುಗಿಸಿದವರು, ಪ್ರಕರಣ ದಾಖಲು ಮಾಡಿಕೊಂಡವರು ಮತ್ತು ಚಾಸಾ- 18 ಇವರು ಈ ಪ್ರಕರಣದ ತನಿಖಾಧಿಕಾರಿಯಾಗಿರುತ್ತಾರೆ.

10. ಈ ನ್ಯಾಯಾಲಯವು ದೋಷಾರೋಪಣಾ ಪಟ್ಟಿಯನ್ನು ಸ್ವೀಕರಿಸಿ, ಸಂಜ್ಞೇಯತೆಯನ್ನು ತೆಗೆದುಕೊಂಡು, ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 20(b)(ii)(B) ರಡಿಯಲ್ಲಿ ಪ್ರಕರಣವನ್ನು ನೋಂದಣಿ ಮಾಡಿಕೊಳ್ಳಲು

ಆದೇಶಿಸಿದ್ದು, ಅದರಂತೆ ವಿಶೇಷ ಮೊಕದ್ದಮೆ ಸಂಖ್ಯೆ 749/2024 ರಲ್ಲಿ ನೋಂದಣಿ ಮಾಡಿಕೊಳ್ಳಲಾಗಿರುತ್ತದೆ.

11. ಆರೋಪಿತನು ಜಾಮೀನಿನ ಮೇಲೆ ಇರುತ್ತಾನೆ. ದೋಷಾರೋಪಣಾ ಪಟ್ಟಿ ಮತ್ತು ಅದರ ಅಡಕಗಳನ್ನು ಆರೋಪಿತನಿಗೆ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 207 ರಡಿಯಲ್ಲಿ ಒದಗಿಸಲಾಗಿರುತ್ತದೆ.

12. ದೋಷಾರೋಪಣೆಯನ್ನು ದಾಖಲು ಮಾಡಿಕೊಳ್ಳುವ ಪೂರ್ವದಲ್ಲಿ, ಆರೋಪಿತನ ಪರ ವಕೀಲರು ಹಾಗೂ ಮಾನ್ಯ ಸರಕಾರಿ ಅಭಿಯೋಜಕರು ಆರೋಪಿತನ ವಿರುದ್ಧ ಆಪಾದಿಸಲಾದ ಆರೋಪಗಳು ಹಾಗೂ ಪ್ರಾಸ್ತಾವಿಕ ಅಂಶಗಳ ಬಗ್ಗೆ ನ್ಯಾಯಾಲಯದ ಮುಂದೆ ಹೇಳಿದ್ದು, ದಾಖಲೆಗಳನ್ನು ಹಾಗೂ ಕಡತಗಳನ್ನು ಪರಿಶೀಲಿಸಿ ಆರೋಪಿತನ ಪರ ವಕೀಲರು ಹಾಗೂ ಸರಕಾರಿ ಅಭಿಯೋಜಕರ ವಾದ ಕೇಳಿದ ನಂತರ, ಆರೋಪಿತನ ವಿರುದ್ಧ ದೋಷಾರೋಪಣೆ ರಚಿಸಲು ಆಧಾರ ಇದೆ ಎಂದು ಮನಗಂಡು, ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 20(b)(ii)(B) ರಡಿ ದೋಷಾರೋಪಣೆಯನ್ನು ರಚಿಸಿ, ಅದನ್ನು ಆರೋಪಿತನಿಗೆ ಓದಿ ಹೇಳಿ, ಕೇಳಲಾಗಿ ಆರೋಪಿತನು ತಾನು ಯಾವುದೇ ತಪ್ಪು ಮಾಡಿರುವುದಿಲ್ಲ, ವಿಚಾರಣೆ ಆಗಬೇಕು ಎಂದು ಕೇಳಿಕೊಂಡಿರುತ್ತಾನೆ.

13. ಅಭಿಯೋಜಕ ಪಕ್ಷವು ಆರೋಪಿತನ ವಿರುದ್ಧ ಮಾಡಿರುವ ಆರೋಪವನ್ನು ರುಜುವಾತುಪಡಿಸುವುದಕ್ಕಾಗಿ ತಮ್ಮ ಪರವಾಗಿ 06 ಜನ ಸಾಕ್ಷಿದಾರರನ್ನು ಪ್ರಾಸಾ- 1 ರಿಂದ 6 ಎಂದು ವಿಚಾರಣೆ ಮಾಡಿಕೊಂಡಿದ್ದು, 18 ದಾಖಲಾತಿಗಳನ್ನು ನಿಶಾನೆ ಪಿ- 1 ರಿಂದ ಪಿ- 18

ಎಂದು ನಿಶಾನೀಕರಿಸಿಕೊಂಡಿರುತ್ತದೆ. ಅಲ್ಲದೇ 10 ಮುದ್ದೆಮಾಲುಗಳನ್ನು ಮು.ಮಾ.- 1 ರಿಂದ 10 ಎಂದು ಸಹ ಗುರುತಿಸಿಕೊಂಡಿರುತ್ತದೆ.

14. ನಿಶಾನೆ ಪಿ- 1 ದೂರು, ನಿಶಾನೆ ಪಿ- 2 ಠಾಣಾ ದಿನಚರಿ, ನಿಶಾನೆ ಪಿ-3 ಜಪ್ತುಪಂಚನಾಮೆ, ನಿಶಾನೆ ಪಿ- 4 ಪಂಚನಾಮೆ ಕಾಲಕ್ಕೆ ತೆಗೆದ ಹದಿನೈದು ಛಾಯಾಚಿತ್ರಗಳು, ನಿಶಾನೆ ಪಿ- 5 ಆರೋಪಿತನ ಗುರುತಿನ ಚೀಟಿ, ನಿಶಾನೆ ಪಿ- 6 ರೈಲ್ವೇ ಟಿಕೇಟ್, ನಿಶಾನೆ ಪಿ-7 ಪಂಚರಿಗೆ ನೀಡಿದ ನೋಟೀಸು, ನಿಶಾನೆ ಪಿ- 8 ಇನ್ವೆಂಟರಿ ಕ್ರಮ ಜರುಗಿಸಲು ತಹಶೀಲ್ದಾರ್ ಇವರಿಗೆ ನೀಡಿದ ಕೋರಿಕೆ ಪತ್ರ, ನಿಶಾನೆ ಪಿ- 9 ಇನ್ವೆಂಟರಿ ಪಂಚನಾಮೆ, ನಿಶಾನೆ ಪಿ- 10 ತಪಶೀಲು ಪಟ್ಟಿ, ಅನೆಕ್ಷರ್- 1, 2, ಪ್ರಪತ್ರ ಮತ್ತು ಮಾದರಿ ಸೀಲು, ನಿಶಾನೆ ಪಿ- 11 ಛಾಯಾಚಿತ್ರಗಳು, ನಿಶಾನೆ ಪಿ- 12 ಪ್ರಥಮ ವರ್ತಮಾನ ವರದಿ, ನಿಶಾನೆ ಪಿ-13 ನೋಟೀಸು, ನಿಶಾನೆ ಪಿ- 14 ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65-ಬಿ ರಡಿಯಲ್ಲಿನ ದೃಢೀಕರಣ ಪತ್ರ, ನಿಶಾನೆ ಪಿ- 15 ದಿನಾಂಕ 30/04/2024 ರಂದು ಬಳ್ಳಾರಿ ರೈಲ್ವೇ ನಿಲ್ದಾಣದ ಸ್ಟೇಷನ್ ಮಾಸ್ಟರ್ ಇವರಿಗೆ ಬರೆದ ಪತ್ರ, ನಿಶಾನೆ ಪಿ- 16 ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65-ಬಿ ರಡಿಯಲ್ಲಿನ ದೃಢೀಕರಣ ಪತ್ರ, ನಿಶಾನೆ ಪಿ- 17 ವಿಧಿ ವಿಜ್ಞಾನ ಪ್ರಯೋಗಾಲಯದವರು ನೀಡಿದ ಹಿಂಬರಹ ಮತ್ತು ನಿಶಾನೆ ಪಿ- 18 ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಆಗಿರುತ್ತವೆ.

15. ಮುದ್ದೆಮಾಲು ಸಂಖ್ಯೆಃ 1 ಆರೋಪಿತನ ಹತ್ತಿರ ಇದ್ದ ಅಮಾನತ್ತು ಪಡಿಸಿಕೊಂಡ ಬ್ಯಾಗ್, ಮುದ್ದೆಮಾಲು ಸಂಖ್ಯೆ 2 ಗಾಂಜಾ ಸುತ್ತಿದ 6 ಕವರ್ ಗಳು, ಮುದ್ದೆಮಾಲು 3- ಕಪ್ಪು ಬಣ್ಣದ ಎಂ.ಐ. ರೆಡ್ಮಿ ಕಂಪನಿಯ ಮೊಬೈಲ್, ಮುದ್ದೆಮಾಲು ಸಂಖ್ಯೆ 4-ಗೋಲ್ಡ್ ಕಲರಿನ ಒಪ್ಪೋ ಕಂಪನಿಯ ಮೊಬೈಲ್, ಮುದ್ದೆಮಾಲು ಸಂಖ್ಯೆ 5 ರಿಂದ 10 ಇನ್ವೆಂಟರಿ ಕಾಲಕ್ಕೆ ತೆಗೆದಿರಿಸಿದ ಮಾದರಿ ಗಾಂಜಾ ಆಗಿರುತ್ತವೆ.

16. ಆರೋಪಣೆ ವಿಚಾರಣೆಯಲ್ಲಿ ಆರೋಪಿತನಿಗೆ ಅವರ ವಿರುದ್ಧ ಸಾಕ್ಷ್ಯ ಕಂಡುಬಂದ ಕಾರಣ ಸನ್ನಿವೇಶವನ್ನು ಖುದ್ದಾಗಿ ಓದಿ ಹೇಳಲಾಯಿತು. ಅಂತೆಯೇ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರಡಿಯಲ್ಲಿ ಆರೋಪಿತನು ನೀಡಿದ ಹೇಳಿಕೆಗಳನ್ನು ದಾಖಲು ಮಾಡಿಕೊಳ್ಳಲಾಯಿತು. ಆರೋಪಿತನು ಅಭಿಯೋಜನೆಯ ದಾಖಲು ಮಾಡಿಕೊಂಡ ಸಾಕ್ಷ್ಯವನ್ನು ಅಲ್ಲಗಳೆದಿದ್ದು, ತನ್ನ ಪರವಾಗಿ ಸಾಕ್ಷಿ ವಿಚಾರಣೆ ಇಲ್ಲವೆಂದು ಹೇಳಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಪ್ರಕರಣವನ್ನು ಉಭಯ ಪಕ್ಷದವರ ವಾದ-ವಿವಾದ ಕೇಳಲು ದಿನಾಂಕವನ್ನು ಗೊತ್ತುಪಡಿಸಲಾಯಿತು.

17. ಅಭಿಯೋಜನೆಯ ಮತ್ತು ಆರೋಪಿತನ ಪರ ವಕೀಲರ ವಾದವನ್ನು ಕೇಳಲಾಯಿತು. ಕಡತವನ್ನು ಪರಿಶೀಲನೆ ಮಾಡಲಾಯಿತು.

18. ಉಭಯ ಪಕ್ಷದವರ ವಾದ ವಿವಾದಾಂಶಗಳನ್ನು ಕೇಳಲಾಗಿ ಈ ಪ್ರಕರಣದಲ್ಲಿ ನಿರ್ಧರಿಸಬೇಕಾದಂತಹ ಈ ಕೆಳಗಿನ ಅಂಶಗಳು ಉದ್ಭವ ಆಗುತ್ತವೆಃ-

1) ದಿನಾಂಕ 28/04/2024 ರಂದು ಬೆಳಿಗ್ಗೆ ಸುಮಾರು 05-15 ಗಂಟೆ ಸಮಯದಲ್ಲೆ ರೈಲುಗಾಡಿ ಸಂಖ್ಯೆ 16592 ನೇಯದ್ದು ಬಳ್ಳಾರಿ ರೈಲ್ವೇ ನಿಲ್ದಾಣದ ವೇದಿಕೆ ನಂ. 1 ರಲ್ಲಿ ಬಂದು ನಿಂತಾಗ, ಸದರಿ ರೈಲಿನ ಸಾಮಾನ್ಯ ಬೋಗಿಯಲ್ಲಿ ಕುಳಿತಿದ್ದ ಆರೋಪಿತನು ಅಂದಾಜು ₹6,22,000/- ಬೆಲೆಬಾಳುವ 6 ಕೆಜಿ 220 ಗ್ರಾಂ ಗಾಂಜಾವನ್ನು ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ಸ್ವಾಧೀನದಲ್ಲಿಟ್ಟುಕೊಂಡು ಸಾಗಾಣಿಕೆ ಮಾಡಿದ್ದನು, ಆ ಮೂಲಕ ಆರೋಪಿತನು ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 20(b)(ii)(B) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾನೆಂದು ಅಭಿಯೋಜನಾ

ಪಕ್ಷದವರು ಯಾವುದೇ ಅನುಮಾನಕ್ಕೆ ಅವಕಾಶವಿಲ್ಲದಂತೆ ರುಜುವಾತು ಪಡಿಸಿರುತ್ತಾರೆಯೇ?

2) ಹಾಗಿದ್ದರೆ, ಯಾವ ಆದೇಶ?

19. ಈ ಮೇಲಿನ ಅಂಶಗಳಿಗೆ ಸಂಬಂಧಿಸಿದಂತೆ, ಈ ನ್ಯಾಯಾಲಯದ ನ್ಯಾಯ ನಿರ್ಣಯವು ಈ ಕೆಳಕಾಣಿಸಿದಂತಿದೆಃ-

1 ನೇ ಅಂಶ:- **ನಕಾರಾತ್ಮಕ**ವಾಗಿ,
2 ನೇ ಅಂಶ:- ಈ ಕೆಳಕಂಡ ಕಾರಣಗಳಿಗಾಗಿ, ಅಂತಿಮ ಆದೇಶದಂತೆಃ-

## ಕಾರಣಗಳು

20. **ಅಂಶ 1 :-** ಅಭಿಯೋಜನೆಯ ಪ್ರಕಾರ, ದಿನಾಂಕ 28/04/2024 ರಂದು ಬೆಳಿಗ್ಗೆ ಸುಮಾರು 05-15 ಗಂಟೆ ಸಮಯದಲ್ಲೆ ರೈಲುಗಾಡಿ ಸಂಖ್ಯೆ 16592 ನೇಯದ್ದು ಅಂದರೆ ಹಂಪಿ ಎಕ್ಸಪ್ರೆಕ್ಸ್ ರೈಲುಗಾಡಿಯು ಬಳ್ಳಾರಿ ರೈಲ್ವೇ ನಿಲ್ದಾಣದ ವೇದಿಕೆ ನಂ. 1 ರಲ್ಲಿ ಬಂದುನಿಂತಾಗ, ಸದರಿ ರೈಲಿನ ಸಾಮಾನ್ಯ ಬೋಗಿಯಲ್ಲಿ ಕುಳಿತಿದ್ದ ಆರೋಪಿತನು ಅಂದಾಜು ₹6,22,000/- ಬೆಲೆಬಾಳುವ 6 ಕೆಜಿ 220 ಗ್ರಾಂ ಗಾಂಜಾವನ್ನು ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ಸ್ವಾಧೀನದಲ್ಲಿಟ್ಟುಕೊಂಡು ಸಾಗಾಣಿಕೆ ಮಾಡಿದ್ದನು, ಹಾಗಾಗಿ ಆರೋಪಿತನು ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 20(b)(ii)(B) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತಾನೆಂದು ಸಾಬೀತುಪಡಿಸುವ ಜವಾಬ್ದಾರಿ ಅಭಿಯೋಜನೆಯದ್ದಾಗಿರುತ್ತದೆ.

21. ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 20 ರ ಅಂಶಗಳು ಈ ಕೆಳಕಾಣಿಸಿದಂತೆ ಇರುತ್ತದೆಃ-

**ಕಲಂ 20. ಗಾಂಜಾ ಸಸ್ಯಕ್ಕೆ ಮತ್ತು ಗಾಂಜಾಕ್ಕೆ ಸಂಬಂಧಿಸಿದ ಉಲ್ಲಂಘನೆಗಾಗಿ ದಂಡನೆ**- ಯಾವನೇ ವ್ಯಕ್ತಿಯು ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮಗಳನ್ನು ಅಥವಾ ಆದೇಶಗಳನ್ನು ಅಥವಾ ಮಂಜೂರು ಮಾಡಲಾದ ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘಿಸಿ,-

(ಎ) ಯಾವುದೇ ಗಾಂಜಾ ಸಸ್ಯವನ್ನು ಬೆಳೆಸಿದರೆ; ಅಥವಾ

(ಬಿ) ಗಾಂಜಾವನ್ನು ಉತ್ಪತ್ತಿಸಿದರೆ, ಸಿದ್ಧಪಡಿಸಿದರೆ, ಸ್ವಾಧೀನದಲ್ಲಿಟ್ಟುಕೊಂಡರೆ, ಮಾರಿದರೆ, ಖರೀದಿಸಿದರೆ, ಸಾಗಿಸಿದರೆ, ಅಂತರರಾಜ್ಯ ಆಮದು ಮಾಡಿದರೆ, ಅಂತರರಾಜ್ಯ ರಫ್ತು ಮಾಡಿದರೆ ಅಥವಾ ಉಪಯೋಗಿಸಿದರೆ, ಆತನು-

(i) ಅಂಥ ಉಲ್ಲಂಘನೆಯು ಖಂಡ (ಎ)ಗೆ ಸಂಬಂಧಿಸುವಲ್ಲಿ ಹತ್ತು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಠಿಣ ಸೆರೆವಾಸದಿಂದ ದಂಡಿತನಾಗತಕ್ಕದ್ದು ಮತ್ತು ಒಂದು ಲಕ್ಷ ರೂಪಾಯಿಗಳ ವೆರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೂ ಸಹ ಹೊಣೆಗಾರನಾಗತಕ್ಕದ್ದು; ಮತ್ತು

(ii) ಆಂಥ ಉಲ್ಲಂಘನೆಯು ಖಂಡ (ಬಿ)ಗೆ ಸಂಬಂಧಿಸಿರುವಲ್ಲಿ,

(ಎ) ಮತ್ತು ಸಣ್ಣ ಪರಿಮಾಣವನ್ನು ಒಳಗೊಂಡಿದ್ದರೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಠಿಣ ಸೆರೆವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) ಮತ್ತು ಸಣ್ಣ ಪರಿಮಾಣಕ್ಕಿಂತ ಹೆಚ್ಚಿನ ಆದರೆ ವಾಣಿಜ್ಯ ಪರಿಮಾಣಕ್ಕಿಂತ ಕಡಿಮೆಯ ಪರಿಮಾಣವನ್ನು ಒಳಗೊಂಡಿದ್ದರೆ ಹತ್ತು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಠಿಣ ಸೆರೆವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು;

(ಸಿ) ಮತ್ತು ವಾಣಿಜ್ಯ ಪರಿಮಾಣವನ್ನು ಒಳಗೊಂಡಿದ್ದರೆ, ಹತ್ತು ವರ್ಷಗಳಿಗಿಂತ ಕಡಿಮೆಯಲ್ಲದ ಇಪ್ಪತ್ತು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಠಿಣ ಸೆರೆವಾಸದಿಂದ ದಂಡಿತನಾಗತಕ್ಕದ್ದು ಮತ್ತು ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಲ್ಲದ ಆದರೆ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೂ ಸಹ ಹೊಣೆಗಾರನಾಗತಕ್ಕದ್ದು.

ಪರಂತು ನ್ಯಾಯಾಲಯವು ತೀರ್ಪಿನಲ್ಲಿ ಉಲ್ಲೇಖಿಸಬಹುದಾದ ಕಾರಣಗಳಿಗಾಗಿ ಎರಡು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನ ದಂಡವನ್ನು ವಿಧಿಸಬಲ್ಲದು.

22. ಆರೋಪಿತನ ಮೇಲೆ ಹೊರಿಸಲಾಗಿರುವ ಆರೋಪವನ್ನು ಸಾಬೀತು ಪಡಿಸುವ ಸಲುವಾಗಿ, ಅಭಿಯೋಜನೆಯು ತನ್ನ ಪರವಾಗಿ 06 ಜನ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿ, 18 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

23. ಅಭಿಯೋಜನೆಯ ಪ್ರಕಾರ, ಚಾಸಾ- 1 ಕೆ.ಎನ್. ಕರಿಯಣ್ಣ ಇವರು ಬಳ್ಳಾರಿಯ ರೈಲ್ವೇ ಆರಕ್ಷಕ ಠಾಣೆಯ ಮುಖ್ಯ ಪೇದೆಯಾಗಿದ್ದು, ಈ ಪ್ರಕರಣದ ಫಿರ್ಯಾದುದಾರರು ಆಗಿರುತ್ತಾರೆ. ಇವರನ್ನು ಪ್ರಾಸಾ- 1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 28/04/2024 ರಂದು ಚುನಾವಣೆ ನಿಮಿತ್ತ ಮಾದಕ ವಸ್ತುಗಳನ್ನು ತೆಗೆದುಕೊಂಡು ಹೋಗುವ ಬಗ್ಗೆ ತಪಾಸಣೆ ಮಾಡಲು ತನ್ನನ್ನು ನೇಮಿಸಿದ್ದು, ತನ್ನೊಂದಿಗೆ ಆರ್.ಫಿ.ಎಫ್. ಆರಕ್ಷಕರು ಇದ್ದರು, ದಿನಾಂಕ 28/04/2024 ರ ಹಿಂದಿನ ರಾತ್ರಿ ತಾನು ಆರ್ ಪಿ ಎಫ್ ಸಿಬ್ಬಂದಿಗಳೊಂದಿಗೆ ಗುಂತಕಲ್ ರೈಲ್ವೇ ನಿಲ್ದಾಣಕ್ಕೆ ಹೋಗಿದ್ದು, ಮರು ದಿನ ಬೆಳಿಗ್ಗೆ ತಾನು ಹಂಪಿ ಎಕ್ಸ್ ಪ್ರೆಸ್ ನಂ. 16592 ನೇದ್ದರ ರೈಲಿನಲ್ಲಿ ಬೆಳಗಿನ ಜಾವಾ 04-00 ಗಂಟೆ ಸಮಯಕ್ಕೆ ಪ್ರಯಾಣಿಸಿ ಬಳ್ಳಾರಿ ರೈಲ್ವೇ ನಿಲ್ದಾಣಕ್ಕೆ ಬಂದಾಗ ಬೆಳಿಗ್ಗೆ 05-40 ಗಂಟೆ ಸಮಯವಾಗಿತ್ತು,

ಸದರಿ ರೈಲಿನ ಹಿಂದೆ 2 ಮತ್ತು ಮುಂದೆ 2 ಸಾಮಾನ್ಯ (ಜನರಲ್) ಬೋಗಿಗಳು ಇದ್ದವು, ತಾನು ಹಿಂದಿನ ಭಾಗದ ಜನರಲ್ ಬೋಗಿಗೆ ಹೋದಾಗ ಒಬ್ಬ ವ್ಯಕ್ತಿಯು ಆಕಾಶ ನೀಲಿ ಮತ್ತು ಕಪ್ಪುಬಣ್ಣದ ಬ್ಯಾಗ್ ಹಿಡಿದುಕೊಂಡು ಅನುಮಾನಾಸ್ಪದವಾಗಿ ಕುಳಿತುಕೊಂಡಿದ್ದನು, ಆತನನ್ನು ತಾನು ವಿಚಾರ ಮಾಡಿ ಬ್ಯಾಗಿನಲ್ಲಿ ಏನಿದೆ ತೆರೆದು ತೋರಿಸಲು ಹೇಳಿದ್ದು, ಸದರಿ ವ್ಯಕ್ತಿ ಬ್ಯಾಗಿನಲ್ಲಿ ಗಾಂಜಾ ಇದೆ ಎಂದು ಹೇಳಿದನು, ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಆತನ ಹೆಸರು ರಘುಶಂಕರ್, ಗುಂತಕಲ್ ವಾಸಿ ಎಂದು ತಿಳಿಸಿದನು ಎಂದು ಸಾಕ್ಷ್ಯನುಡಿದಿರುತ್ತಾರೆ. ಇವರು ತಮ್ಮ ಸಾಕ್ಷ್ಯದಲ್ಲಿ ಬ್ಯಾಗ್‌ನ್ನು ಪರಿಶೀಲನೆ ಮಾಡಿದಾಗ ಖಾಕಿ ಟೇಪ್ ಸುತ್ತಿದ 6 ಬಂಡಲ್ ಗಳು ದೊರೆತವು, ತಾನು ಸದರಿ ವ್ಯಕ್ತಿಯನ್ನು ವಸ್ತುಗಳ ಸಮೇತ ರೈಲ್ವೇ ಆರಕ್ಷಕ ಠಾಣೆಯ ಎಎಸ್‌ಐ ಇವರ ಸಮಕ್ಷಮ ಹಾಜರುಪಡಿಸಿದ್ದು, ಎಎಸ್‌ಐ ಇವರು ತಾನು ಹಾಜರುಪಡಿಸಿದ ವಸ್ತುಗಳನ್ನು ತೂಕ ಮಾಡಿದಾಗ ಅದು 6 ಕೆಜಿ 200 ಗ್ರಾಂ ಗಾಂಜಾ ತೂಕ ಬಂತು, ಬ್ಯಾಗಿನಲ್ಲಿ ಎರಡು ಮೊಬೈಲ್ ಫೋನುಗಳು ಮತ್ತು ಒಂದು ಟಿಕೆಟ್ ಇತ್ತು, ಪಂಚರ ಸಮಕ್ಷಮದಲ್ಲಿ ನಿಶಾನೆ ಪಿ- 3 ರಂತೆ ಪಂಚನಾಮೆ ಮಾಡಿ ಗಾಂಜಾವನ್ನು ವಶಪಡಿಸಿಕೊಳ್ಳಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇವರು ತಮ್ಮ ಸಾಕ್ಷ್ಯದಲ್ಲಿ ನಂತರ ತಾನು ನಿಶಾನೆ ಪಿ- 1 ರಂತೆ ದೂರನ್ನು ಸಲ್ಲಿಸಿರುವುದಾಗಿ, ಆರೋಪಿತನನ್ನು ತಾನು ಠಾಣಾಧಿಕಾರಿಯವರ ಮುಂದೆ ಹಾಜರುಪಡಿಸಿದ ನಂತರ ಠಾಣಾ ದಿನಚರಿಯಲ್ಲಿ ನಿಶಾನೆ ಪಿ- 2 ರಂತೆ ನಮೂದು ಮಾಡಿರುವುದಾಗಿ, ಪಂಚನಾಮೆ ಕಾಲಕ್ಕೆ ನಿಶಾನೆ ಪಿ- 4 ರಂತೆ ಛಾಯಾಚಿತ್ರಗಳನ್ನು ತೆಗೆಯಲಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸಾಕ್ಷಿಯು ಆರೋಪಿತನ ಸ್ವಾಧೀನದಲ್ಲಿದ್ದ ಬ್ಯಾಗು, ಗಾಂಜಾ ಸುತ್ತಿದ 6 ಬಂಡಲ್‌ಗಳ ಪ್ಯಾಕ್, ಎರಡು ಮೊಬೈಲ್ ಗಳನ್ನು ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮುದ್ದೆ ಮಾಲು ಸಂಖ್ಯೆ: 1 ರಿಂದ 4 ಎಂದು ಗುರುತಿಸಿಕೊಳ್ಳಲಾಗಿದೆ. ಸಾಕ್ಷಿಯು ಆರೋಪಿತನ ಲೇಬರ್ ಕಾರ್ಡ್ ಗುರುತಿನ ಚೀಟಿ ಮತ್ತು ಆರೋಪಿತನು ಹೊಂದಿದ್ದ ರೈಲ್ವೇ ಟಿಕೆಟ್‌ನ್ನು

ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಶಾನೆ ಪಿ- 5 ಮತ್ತು ನಿಶಾನೆ ಪಿ- 6 ಎಂದು ಗುರುತಿಸಿಕೊಳ್ಳಲಾಗಿದೆ. ಸಾಕ್ಷಿಯು ಮೊಬೈಲ್ ಮತ್ತು ಗುರುತಿನ ಚೀಟಿಯನ್ನು ಹಾಕಿ ಸೀಲ್ ಮಾಡಿದ ಪ್ಯಾಕಿನ ಮೇಲೆ ತನ್ನ ಸಹಿ ಕಂಡುಬರುತ್ತದೆ ಎಂದು ನುಡಿದಿರುತ್ತಾರೆ.

24. ಅಭಿಯೋಜನೆಯ ಪ್ರಕಾರ ಚಾಸಾ- 3 ಅಶ್ವಥ್ ಇವರು ನಿಶಾನೆ ಪಿ- 3 ಜಪ್ತುಪಂಚನಾಮೆಯ ಸಾಕ್ಷಿದಾರರಾಗಿದ್ದು, ಇವರನ್ನು ಅಭಿಯೋಜನೆಯು ಪ್ರಾಸಾ- 2 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ನಿಶಾನೆ ಪಿ- 3 ಪಂಚನಾಮೆಯಲ್ಲಿ ತನ್ನ ಸಹಿ ಇರುವುದಾಗಿ, ಸದರಿ ಸಹಿಯನ್ನು ದಿನಾಂಕ 28/04/2024 ರಂದು ಜಿ.ಆರ್.ಪಿ. ರೈಲ್ವೇ ನಿಲ್ದಾಣದೊಳಗಡೆ ಮಾಡಿರುವುದಾಗಿ, ಸ್ಥಳದಲ್ಲಿ ಗಾಂಜಾ ಬಂಡಲ್ ಗಳು, ಮೊಬೈಲ್ ಮತ್ತು ರೈಲ್ವೇ ಟಿಕೆಟ್ ಇತ್ತು, ಈ ಎಲ್ಲಾ ವಸ್ತುಗಳನ್ನು ಒಂದು ಬ್ಯಾಗಿನಲ್ಲಿ ಹಾಕಿದ್ದರು, ಆ ಸಮಯ ಬರೆದ ದಾಖಲೆಗೆ ತಾನು ಸಹಿ ಮಾಡಿರುವುದಾಗಿ, ಆರಕ್ಷಕರು ನಿಶಾನೆ ಪಿ- 4 ರಂತೆ ಛಾಯಾಚಿತ್ರಗಳನ್ನು ತೆಗೆದಿದ್ದಾರೆ, ಅವುಗಳಲ್ಲಿ ತಾನು ಕಂಡುಬರುತ್ತೇನೆ, ಪಂಚನಾಮೆಗೆ ಆರಕ್ಷಕರು ತನಗೆ ನಿಶಾನೆ ಪಿ- 7 ರಂತೆ ನೋಟೀಸು ನೀಡಿ ತನ್ನ ಸಹಿ ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸಾಕ್ಷಿಯು ಮುದ್ದೆ ಮಾಲು ಸಂ. 3 ಮತ್ತು 4 ಮೊಬೈಲ್ ಗಳು ಮತ್ತು ನಿಶಾನೆ ಪಿ- 6 ರೈಲ್ವೇ ಟಿಕೆಟ್‌ನ್ನು ಗುರುತಿಸಿರುತ್ತಾರೆ.

25. ಅಭಿಯೋಜನೆಯ ಪ್ರಕಾರ ಚಾಸಾ- 16 ಗುರುರಾಜ್, ಆಗಿನ ಬಳ್ಳಾರಿಯ ತಹಶೀಲ್ದಾರ್ ಆಗಿದ್ದು, ಇವರ ಸಮಕ್ಷಮ ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಗಾಂಜಾದ ಇನ್ವೆಂಟರಿ ಕ್ರಮ ಜರುಗಿಸಲಾಗಿರುತ್ತದೆ. ಇವರನ್ನು ಅಭಿಯೋಜನೆಯು ಪ್ರಾಸಾ- 3 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ಬಳ್ಳಾರಿಯ ರೈಲ್ವೇ ಆರಕ್ಷಕರು

ದಿನಾಂಕ 28/04/2024 ರಂದು ಇನ್ವೆಂಟರಿ ಮಾಡುವ ಸಲುವಾಗಿ ತನಗೆ ನಿಶಾನೆ ಪಿ- 8 ರಂತೆ ಕೋರಿಕೆ ಪತ್ರ ನೀಡಿದ್ದು, ದಿನಾಂಕ 02/05/2024 ರಂದು ಮಧ್ಯಾನ್ಹ 12-00 ಗಂಟೆ ಸಮಯಕ್ಕೆ ರೈಲ್ವೇ ಆರಕ್ಷಕರು ತನ್ನ ಮುಂದೆ 6 ಬಂಡಲ್ ನಲ್ಲಿದ್ದ ಗಾಂಜಾವನ್ನು ಹಾಜರುಪಡಿಸಿದ್ದು, ತಾನು ಪ್ರತಿ ಬಂಡಲನ್ನು ತೂಕ ಮಾಡಿದಾಗ, 1 ನೇ ಬಂಡಲ್‌ನಲ್ಲಿ 1 ಕೆಜಿ 70 ಗ್ರಾಂ ಗಾಂಜಾ, 2 ನೇ ಬಂಡಲನ್ನು ತೂಕ ಮಾಡಿದಾಗ ಅದು 1 ಕೆಜಿ 20 ಗ್ರಾಂ ಗಾಂಜಾ, 3 ನೇ ಬಂಡಲ್ ತೂಕ ಮಾಡಿದಾಗ ಅದು 1 ಕೆಜಿ 10 ಗ್ರಾಂ ಗಾಂಜಾ, 4 ನೇ ಬಂಡಲ್ ತೂಕ ಮಾಡಿದಾಗ ಅದು 990 ಗ್ರಾಂ ಗಾಂಜಾ, 5 ನೇ ಬಂಡಲ್ ತೂಕ ಮಾಡಿದಾಗ ಅದು 1 ಕೆಜಿ 70 ಗ್ರಾಂ ಗಾಂಜಾ, 6 ನೇ ಬಂಡಲ್ ತೂಕ ಮಾಡಿದಾಗ ಅದು 960 ಗ್ರಾಂ ಗಾಂಜಾ ತೂಕ ಬಂತು, ಒಟ್ಟು 6 ಕೆಜಿ 220 ಗ್ರಾಂ ಗಾಂಜಾ ತೂಕವಿತ್ತು, ಪ್ರತಿ ಬಂಡಲ್‌ನಿಂದ 30 ಗ್ರಾಂ ಗಾಂಜಾವನ್ನು ಮಾದರಿಗಾಗಿ ತೆಗೆದಿರಿಸಲಾಯಿತು, ಪಂಚನಾಮೆ ಕಾಲಕ್ಕೆ ಕೀರಲಿಂಗ ಮತ್ತು ಖಾಸೀಂ ಇವರು ಹಾಜರಿದ್ದರು, ಮಧ್ಯಾನ್ಹ 12-00 ರಿಂದ 01-00 ಗಂಟೆವರೆಗೆ ನಿಶಾನೆ ಪಿ- 9 ರಂತೆ ಇನ್ವೆಂಟರಿ ಪಂಚನಾಮೆ ಜರುಗಿಸಲಾಯಿತು, ಅದೇ ರೀತಿ ತಾನು ನಿಶಾನೆ ಪಿ- 10 ರಂತೆ ಅನೆಕ್ಷರ್- 1, ಸರ್ಟಿಫಿಕೇಟ್ ತಪಶೀಲು ಪಟ್ಟಿ, ಮಾದರಿ ಸೀಲನ್ನು ಒದಗಿಸಿರುವುದಾಗಿ ಹಾಗೂ ನಿಶಾನೆ ಪಿ- 11 ರಂತೆ ಛಾಯಾಚಿತ್ರಗಳನ್ನು ತೆಗೆಯಲಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸಾಕ್ಷಿಯು ಇನ್ವೆಂಟರಿ ಕಾಲಕ್ಕೆ ತೆಗೆದಿರಿಸಿದ ಮಾದರಿ ಗಾಂಜಾವನ್ನು ಗುರುತಿಸಿದ್ದು ಅವುಗಳನ್ನು ಮುದ್ದೆಮಾಲು 5 ರಿಂದ 10 ಎಂದು ಗುರುತಿಸಿಕೊಳ್ಳಲಾಗಿದೆ. ಸಾಕ್ಷಿಯು ಮು.ಮಾ-5 ರಿಂದ 10 ಪ್ಯಾಕೇಟ್ ಗಳ ಮೇಲೆ ತನ್ನ ಮತ್ತು ಪಂಚರ ಸಹಿ ಕಂಡುಬರುತ್ತದೆ ಎಂದು ನುಡಿದಿರುತ್ತಾರೆ.

26. ಚಾಸಾ- 17 ಶಿವಮೂರ್ತಿ ಇವರು ರೈಲ್ವೇ ಆರಕ್ಷಕ ಠಾಣೆಯಲ್ಲಿ ಸಹಾಯಕ ಆರಕ್ಷಕ ಉಪ-ನಿರೀಕ್ಷಕರಾಗಿ ಕರ್ತವ್ಯನಿರ್ವಹಿಸುತ್ತಿರುವವರಾಗಿದ್ದು, ಇವರನ್ನು ಅಭಿಯೋಜನೆಯು

ಪ್ರಾಸಾ- 4 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದೆ. ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 28/04/2024 ರಂದು ತಾನು ಠಾಣಾ ಕರ್ತವ್ಯದಲ್ಲಿದ್ದಾಗ ಬೆಳಿಗ್ಗೆ 07-35 ಗಂಟೆ ಸಮಯದಲ್ಲಿ ಪ್ರಾಸಾ- 1 ಮತ್ತು ಆರ್.ಪಿ.ಎಫ್. ಸಿಬ್ಬಂದಿಯವರು ಒಂದು ಆಕಾಶ ನೀಲಿ ಬಣ್ಣದ ಬ್ಯಾಗಿನಲ್ಲಿ 6 ಬಂಡಲ್ ಗಳಲ್ಲಿದ್ದ ಗಾಂಜಾವನ್ನು ಆರೋಪಿತನೊಂದಿಗೆ ತನ್ನ ಮುಂದೆ ಹಾಜರುಪಡಿಸಿದರು, ಪ್ರಾಸಾ- 1 ಇವರು ನಿಶಾನೆ ಪಿ- 1 ರಂತೆ ಫಿರ್ಯಾದು ನೀಡಿದ್ದು, ಸದರಿ ಫಿರ್ಯಾದು ಸ್ವೀಕರಿಸಿ ಪ್ರಕರಣ ದಾಖಲು ಮಾಡಿಕೊಂಡು, ನಿಶಾನೆ ಪಿ- 12 ರಂತೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಡಲಾಯಿತು ಎಂದು ಸಾಕ್ಷ್ಯನುಡಿದಿರುತ್ತಾರೆ.

27. ಇವರು ತಮ್ಮ ಸಾಕ್ಷ್ಯದಲ್ಲಿ ಬಸವರಾಜ್ ಮತ್ತು ಅಶ್ವಥ್ ಇವರಿಗೆ ನಿಶಾನೆ ಪಿ- 7 ರಂತೆ ನೋಟೀಸು ನೀಡಿ ಪಂಚರನ್ನಾಗಿ ಕರೆಸಿದ್ದು, ಅವರಿಗೆ ವಿಷಯ ತಿಳಿಸಿ ಆಕಾಶ ನೀಲಿ ಬಣ್ಣದ ಬ್ಯಾಗನ್ನು ತೆರೆದು ನೋಡಿದಾಗ ಅದರಲ್ಲಿ 6 ಬಂಡಲ್ ಗಾಂಜಾ, 2 ಮೊಬೈಲ್ ಫೋನುಗಳು ಇದ್ದು, ಅವುಗಳು ರೆಡ್ಮಿ ಮತ್ತು ಒಪ್ಪೋ ಕಂಪನಿಗೆ ಸೇರಿದ್ದವು, ಸದರಿ ಬ್ಯಾಗ್ ನಲ್ಲಿ ಒಂದು ಜನರಲ್ ರೈಲ್ವೇ ಟಿಕೆಟ್ ಇತ್ತು, 6 ಬಂಡಲ್ ಗಳ ಗಾಂಜಾವನ್ನು ತೂಕ ಮಾಡಿದಾಗ ಒಟ್ಟು 6 ಕೆಜಿ 220 ಗ್ರಾಂ ದೊರೆಯಿತು, ಅವುಗಳನ್ನು ನಿಶಾನೆ ಪಿ- 3 ಪಂಚನಾಮೆ ಮೂಲಕ ಅಮಾನತ್ತು ಪಡಿಸಿಕೊಳ್ಳಲಾಯಿತು, ಪಂಚನಾಮೆ ಕಾಲಕ್ಕೆ ನಿಶಾನೆ ಪಿ- 4 ರಂತೆ ಛಾಯಾಚಿತ್ರಗಳನ್ನು ತಗೆಯಲಾಗಿದೆ ಎಂದು ಸಾಕ್ಷ್ಯನುಡಿದಿರುತ್ತಾರೆ.

28. ಪ್ರಾಸಾ- 4 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆರೋಪಿತನ ಸ್ವಇಚ್ಛಾ ಹೇಳಿಕೆ ಮಾಡಿಕೊಂಡು, ನಂತರ ಆರೋಪಿತನನ್ನು ನ್ಯಾಯಾಧೀಶರ ಸಮಕ್ಷಮ ಹಾಜರುಪಡಿಸಿರುವುದಾಗಿ, ನಂತರ ಮುಂದಿನ ತನಿಖೆಯನ್ನು ತಾನು ಚಾಸಾ- 18 ಇವರಿಗೆ

ವಹಿಸಿಕೊಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸಾಕ್ಷಿಯು ಆರೋಪಿತನ ಸ್ವಾಧೀನದಿಂದ ಅಮಾನತ್ತುಪಡಿಸಿಕೊಂಡ ಗಾಂಜಾ, 2 ಮೊಬೈಲ್ ಫೋನುಗಳು, ರೈಲ್ವೇ ಟಿಕೆಟ್ ಮತ್ತು ಗುರುತಿನ ಚೀಟಿಯನ್ನು ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು- 1 ರಿಂದ 4 ಮತ್ತು ನಿಶಾನೆ ಪಿ- 5 ಮತ್ತು 6 ಎಂದು ಗುರುತಿಸಿಕೊಳ್ಳಲಾಗಿದೆ.

29. ಅಭಿಯೋಜನೆಯ ಪ್ರಕಾರ ಚಾಸಾ- 5 ಖಾಸೀಂ ಇವರು ಈ ಪ್ರಕರಣದಲ್ಲಿ ಜರುಗಿಸಿದ ಇನ್ವೆಂಟರಿ ಪಂಚನಾಮೆಯ ಸಾಕ್ಷಿದಾರರಾಗಿದ್ದು, ಇವರನ್ನು ಅಭಿಯೋಜನೆಯು ಪ್ರಾಸಾ- 5 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದೆ. ಇವರು ತಮ್ಮ ಸಾಕ್ಷ್ಯದಲ್ಲಿ ನಿಶಾನೆ ಪಿ- 13 ದಾಖಲೆಯಲ್ಲಿ ತನ್ನ ಸಹಿ ಇದೆ, ಈಗ್ಗೆ ಸುಮಾರು ಒಂದೂವರೆ ವರ್ಷಗಳ ಹಿಂದೆ ತಾನು ಮತ್ತು ಕೀರಲಿಂಗ ಇವರು ಆರಕ್ಷಕರು ತಾಲ್ಲೂಕು ಕಛೇರಿ ಹತ್ತಿರ ಕರೆದುಕೊಂಡು ಹೋಗಿದ್ದು, ಆಗ ಬೆಳಿಗ್ಗೆ 11-00 ಗಂಟೆ ಸಮಯವಾಗಿತ್ತು, ಆರಕ್ಷಕರು ತಾಲ್ಲೂಕು ಕಛೇರಿಗೆ 6 ಗಾಂಜಾ ಬ್ಯಾಗುಗಳನ್ನು ತಂದಿದ್ದರು, ತನ್ನ ಸಮಕ್ಷಮದಲ್ಲಿ ಒಂದೊಂದು ಬಂಡಲ್‌ನಿಂದ ತಲಾ 30 ಗ್ರಾಂ ನಂತೆ ಮಾದರಿ ಗಾಂಜಾವನ್ನು ತೆಗೆದಿರುತ್ತಾರೆ, ಆ ಕಾಲಕ್ಕೆ ನಿಶಾನೆ ಪಿ- 9 ರಂತೆ ಪಂಚನಾಮೆ ಬರೆದು, ತನ್ನ ಸಹಿ ಪಡೆದಿರುತ್ತಾರೆ ಮತ್ತು ನಿಶಾನೆ ಪಿ- 11 ರಂತೆ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ, ಅವುಗಳಲ್ಲಿ ತಾನು ಮತ್ತು ಕೀರಲಿಂಗ ಕಂಡುಬರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸಾಕ್ಷಿಯು ಮುದ್ದೆಮಾಲು ಸಂ. 5 ರಿಂದ 10 ಮಾದರಿ ಗಾಂಜಾಗಳನ್ನು ಗುರುತಿಸಿರುತ್ತಾರೆ.

30. ಅಭಿಯೋಜನೆಯ ಪ್ರಕಾರ ಚಾಸಾ- 18 ಮುದಿಯಪ್ಪ , ತಂದೆ. ಮಲ್ಲಪ್ಪ ಇವರು ಬಳ್ಳಾರಿಯ ರೈಲ್ವೇ ಆರಕ್ಷಕ ಠಾಣೆಯಲ್ಲಿ ಆರಕ್ಷಕ ಉಪ-ನಿರೀಕ್ಷಕರಾಗಿ ಕರ್ತವ್ಯನಿರ್ವಹಿಸುತ್ತಿರುವವರಾಗಿದ್ದು, ಈ ಪ್ರಕರಣದ ತನಿಖಾಧಿಕಾರಿಯಾಗಿರುತ್ತಾರೆ. ಇವರನ್ನು

ಅಭಿಯೋಜನೆಯು ಪ್ರಾಸಾ- 6 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 29/04/2024 ರಂದು ತಾನು ಎಎಸ್ಐ ಶಿವಮೂರ್ತಿ ಇವರಿಂದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿದ್ದು, ಅದೇ ದಿನ ಆರ್ ಪಿಸಿ ಶ್ಯಾಂ ಸುಂದರ್ ಇವರಿಂದ ಛಾಯಾಚಿತ್ರಗಳನ್ನು ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65-ಬಿ ರ ಪ್ರಕಾರ ಸರ್ಟಿಫಿಕೇಟ್ ನ್ನು ನಿಶಾನೆ ಪಿ- 14 ರಂತೆ ಪಡೆದು, ಅವರ ಹೇಳಿಕೆ ಮಾಡಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 30/04/2024 ರಂದು ರೈಲುಗಾಡಿ ಸಂ.16592 ಹಂಪಿ ಎಕ್ಸಪ್ರೆಸ್ ರೈಲು ಗಾಡಿಯು ಬಳ್ಳಾರಿ ರೈಲ್ವೇ ನಿಲ್ದಾಣಕ್ಕೆ ಬಂದ ಸಮಯದ ನಿಖರತೆ ತಿಳಿಯುವ ಸಲುವಾಗಿ ಸ್ಟೇಷನ್ ಮಾಸ್ಟರ್ ಇವರಿಗೆ ನಿಶಾನೆ ಪಿ- 15 ರಂತೆ ಪತ್ರ ಬರೆದಿದ್ದು, ಸದರಿ ಪತ್ರದ ಮೇಲೆ ಸ್ಟೇಷನ್ ಮಾಸ್ಟರ್ ಹಂಪಿ ಎಕ್ಸಪ್ರೆಸ್ ರೈಲು ಬಳ್ಳಾರಿ ರೈಲ್ವೇ ನಿಲ್ದಾಣಕ್ಕೆ ಬಂದ ಸಮಯವನ್ನು ನಮೂದಿಸಿದ್ದಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ.

31. ಪ್ರಾಸಾ- 6 ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 01/05/2024 ರಂದು ಫಿರ್ಯಾದುದಾರರ ಮರು ಹೇಳಿಕೆ ಮತ್ತು ಪಂಚರನ್ನು ಕರೆದುಕೊಂಡ ಬಂದ ಸಿಬ್ಬಂದಿಗಳ ಹೇಳಿಕೆ ಮಾಡಿಕೊಂಡಿರುವುದಾಗಿ, ದಿನಾಂಕ 02/05/2024 ರಂದು ಮಧ್ಯಾನ್ಹ 12-10 ರಿಂದ 01-00 ಗಂಟೆವರೆಗೆ ತಹಶೀಲ್ದಾರ್ ಇವರ ಸಮಕ್ಷಮದಲ್ಲಿ ಪಂಚರಾದ ಕೀರಲಿಂಗ ಮತ್ತು ಖಾಸೀಂ ಇವರ ಹಾಜರಾತಿಯಲ್ಲಿ ಜಪ್ತುಪಡಿಸಿಕೊಂಡ ಗಾಂಜಾದ ಇನ್ವೆಂಟರಿ ಕ್ರಮ ಜರುಗಿಸಲಾಯಿತು, 6 ಬಂಡಲ್‌ಗಳಿಂದ ತಲಾ 30 ಗ್ರಾಂ ನಂತೆ 180 ಗ್ರಾಂ ಗಾಂಜಾವನ್ನು ಮಾದರಿಗಾಗಿ ತೆಗೆದಿರಿಸಲಾಯಿತು, ಇನ್ವೆಂಟರಿ ಕಾಲಕ್ಕೆ ನಿಶಾನೆ ಪಿ-9 ರಂತೆ ಪಂಚನಾಮೆ ಬರೆಯಲಾಯಿತು, ನಿಶಾನೆ ಪಿ- 10 ರಂತೆ ಅನೆಕ್ಷರ್- 1, ತಪಶೀಲು ಪಟ್ಟಿ ಪಡೆಯಲಾಯಿತು

ಹಾಗೂ ನಿಶಾನೆ ಪಿ- 11 ರಂತೆ ಛಾಯಾಚಿತ್ರ ತೆಗೆಯಲಾಯಿತು ಎಂದು ಸಾಕ್ಷ್ಯನುಡಿದಿರುತ್ತಾರೆ. ಇವರು ತಮ್ಮ ಸಾಕ್ಷ್ಯದಲ್ಲಿ ಇನ್ವೆಂಟರಿ ಪಂಚನಾಮೆ ಕಾಲಕ್ಕೆ ಹಾಜರಿರಲು ಪಂಚರಿಗೆ ನಿಶಾನೆ ಪಿ - 13 ರಂತೆ ನೋಟೀಸು ನೀಡಲಾಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸಾಕ್ಷಿಯು ಇನ್ವೆಂಟರಿ ಕಾಲಕ್ಕೆ ತೆಗೆದಿರಿಸಿದ ಮು.ಮಾ.-5 ರಿಂದ 10 ನ್ನು ಗುರುತಿಸಿದ್ದು, ಅವುಗಳ ಮೇಲೆ ತನ್ನ ಹಾಗೂ ಪಂಚರ ಸಹಿಯುಳ್ಳ ಚೀಟಿ ಕಂಡುಬರುತ್ತದೆ ಎಂದು ಹೇಳಿರುತ್ತಾರೆ.

32. ಪ್ರಾಸಾ- 6 ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 03/05/2024 ರಂದು ಠಾಣಾ ಸಿಬ್ಬಂದಿಗಳಾದ ಮುತ್ತಪ್ಪ ಮತ್ತು ಕಲಪ್ಪ ಇವರ ಹೇಳಿಕೆ ಪಡೆದುಕೊಂಡು, ಸಾಕ್ಷಿ ಕಲ್ಲಪ್ಪ ಇವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65-ಬಿ ರಡಿಯಲ್ಲಿ ಸರ್ಟಿಫಿಕೇಟನ್ನು ನಿಶಾನೆ ಪಿ- 16 ರಂತೆ ಪಡೆದುಕೊಂಡಿರುವುದಾಗಿ ಮತ್ತು ದಿನಾಂಕ 11/05/2024 ರಂದು ಎ.ಎಸ್.ಐ., ಡಿ.ಸಿ. ರಾಠೋಡ್, ಸಂದೀಪ್ ಮತ್ತು ರಫೀಕ್ ಇವರ ಹೇಳಿಕೆ ಮಾಡಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 08/05/2024 ರಂದು ಠಾಣಾ ಸಿಬ್ಬಂದಿಯಾದ ಆರ್‌ಪಿಸಿ- 540 ಮಂಜುನಾಥ ಇವರ ಮುಖಾಂತರ ಇನ್ವೆಂಟರಿ ಕಾಲಕ್ಕೆ ತೆಗೆದಿರಿಸಿದ ಮಾದರಿ ಗಾಂಜಾವನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ಕೊಟ್ಟಿರುವುದಾಗಿ, ವಿಧಿ ವಿಜ್ಞಾನ ಪ್ರಯೋಗಾಲಯದಿಂದ ನಿಶಾನೆ ಪಿ- 17 ರಂತೆ ಸ್ವೀಕೃತಿಯನ್ನು ಪಡೆದಿರುವುದಾಗಿ ಮತ್ತು ದಿನಾಂಕ 15/06/2024 ರಂದು ಈ ಪ್ರಕರಣದಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯನ್ನು ಬಾಕಿ ಇಟ್ಟು ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇವರು ತಮ್ಮ ಸಾಕ್ಷ್ಯದಲ್ಲಿ ನಂತರದಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯದಿಂದ ನಿಶಾನೆ ಪಿ- 18 ರಂತೆ

ವರದಿಯನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಗಿ ಸಾಕ್ಷ್ಯ ನುಡಿದಿರುತ್ತಾರೆ.

33. **ಪ್ರಾಜ್ಞ ಸರಕಾರಿ ಅಭಿಯೋಜಕರು** ತಮ್ಮ ವಾದವನ್ನು ಮಂಡಿಸುತ್ತಾ, ದಿನಾಂಕ 28/04/2024 ರಂದು ಪ್ರಾಸಾ- 1 ಇವರು ಸಿಬ್ಬಂದಿಗಳೊಂದಿಗೆ ಚುನಾವಣೆ ನಿಮಿತ್ತ ಮಾದಕ ವಸ್ತುಗಳನ್ನು ತೆಗೆದುಕೊಂಡು ಹೋಗುವ ಬಗ್ಗೆ ತಪಾಸಣೆ ಮಾಡಲು ಗುಂತಕಲ್ ರೈಲ್ವೇ ನಿಲ್ದಾಣಕ್ಕೆ ಹೋಗಿ, ನಂತರ ಹಂಪಿ ಎಕ್ಸಪ್ರೆಸ್ ರೈಲುಗಾಡಿಯಲ್ಲಿ ಬಳ್ಳಾರಿಗೆ ಬರುವ ಸಮಯ, ಸದರಿ ರೈಲುಗಾಡಿಯ ಹಿಂದೆ ಅಳವಡಿಸಿದ್ದ ಜನರಲ್ ಬೋಗಿಯಲ್ಲಿ ಆರೋಪಿತನು ಆಕಾಶ ನೀಲಿ ಹಾಗೂ ಕಪ್ಪು ಬಣ್ಣದ ಬ್ಯಾಗ್ ಹಿಡಿದುಕೊಂಡು ಅನುಮಾನಾಸ್ಪದವಾಗಿ ಕುಳಿತುಕೊಂಡಿದ್ದು, ಆತನನ್ನು ಬ್ಯಾಗಿನಲ್ಲಿ ಏನಿದೆ ಎಂದು ವಿಚಾರಿಸಿದಾಗ, ಆತನು ಗಾಂಜಾ ಇದೆ ಎಂದು ತಿಳಿಸಿದ ಮೇರೆಗೆ, ಆತನನ್ನು ರೈಲ್ವೇ ಆರಕ್ಷಕ ಠಾಣೆಯ ಎಎಸ್‌ಐ ಆದ ಪ್ರಾಸಾ-4 ಇವರ ಸಮಕ್ಷಮ ಹಾಜರುಪಡಿಸಿ, ಸದರಿ ಬ್ಯಾಗ್ ನಲ್ಲಿ 6 ಬಂಡಲ್‌ಗಳಲ್ಲಿದ್ದ ಗಾಂಜಾವನ್ನು ತೂಕ ಮಾಡಿದಾಗ ಒಟ್ಟು 6 ಕೆಜಿ 220 ಗ್ರಾಂ ಗಾಂಜಾ ಇರುವುದು ಕಂಡುಬಂದಿದ್ದು, ಪಂಚರ ಸಮಕ್ಷಮದಲ್ಲಿ ನಿಶಾನೆ ಪಿ- 3 ಪಂಚನಾಮೆ ಮೂಲಕ ಜಪ್ತುಪಡಿಸಿಕೊಳ್ಳಲಾಗಿರುತ್ತದೆ ಎಂದು ವಾದ ಮಂಡಿಸಿರುತ್ತಾರೆ. ಇವರು ಮುಂದುವರೆದು ವಾದ ಮಂಡಿಸುತ್ತಾ, ಜಪ್ತುಪಡಿಸಿಕೊಂಡ ಗಾಂಜಾವನ್ನು ಇನ್ವೆಂಟರಿ ಕ್ರಮ ಜರುಗಿಸಿ ಮಾದರಿಗಾಗಿ ತೆಗೆದಿರಿಸಿದ ಗಾಂಜಾವನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿದೆ ಎಂದು ಹೇಳಿರುತ್ತಾರೆ. ತಮ್ಮ ವಾದವನ್ನು ಮುಂದುವರೆಸುತ್ತಾ, ಆರೋಪಿತನ ವಶದಿಂದ ನಿಷಿದ್ಧ ವಸ್ತುಗಳನ್ನು ವಶಪಡಿಸಿಕೊಂಡಿರುವುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತುಪಡಿಸಿದೆ ಎಂದು ವಾದ ಮಂಡಿಸಿರುತ್ತಾರೆ. ಮುಂದುವರೆದು ವಾದಿಸುತ್ತಾ, ನ್ಯಾಯಾಲಯದ ಮುಂದೆ

ಸಲ್ಲಿಸಲಾದ ಮೌಖಿಕ ಮತ್ತು ದಾಖಲೆ ಸಾಕ್ಷ್ಯಗಳು ಆರೋಪಿತನು ಒಟ್ಟು 6 ಕೆಜಿ 220 ಗ್ರಾಂ ಗಾಂಜಾವನ್ನು ಅಕ್ರಮವಾಗಿ ಹೊಂದಿದ್ದನು, ಅದನ್ನು ಸಾರ್ವಜನಿಕರಿಗೆ ಅನಧಿಕೃತವಾಗಿ ಮಾರಾಟ ಮಾಡಿ, ಕಾನೂನು ಬಾಹಿರವಾಗಿ ಲಾಭ ಗಳಿಸಲು ಹಂಪಿ ಎಕ್ಸಪ್ರೆಸ್ ರೈಲು ಗಾಡಿಯಲ್ಲಿ ಸಾಗಾಣಿಕೆ ಮಾಡುತ್ತಿದ್ದನು ಎಂಬುದನ್ನು ನಿಸ್ಸಂಶಯವಾಗಿ ಸಾಬೀತುಪಡಿಸಿರುತ್ತದೆ ಎಂದು ಹೇಳಿರುತ್ತಾರೆ. ಮುಂದುವರೆದು ತನಿಖಾಧಿಕಾರಿಯು ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರಡಿಯಲ್ಲಿಯ ಕಾಯ್ದೆಯ ಎಲ್ಲಾ ಕಡ್ಡಾಯ ನಿಬಂಧನೆಗಳನ್ನು ಪಾಲಿಸಿದ್ದಾರೆ, ಆದಕಾರಣ ಆರೋಪಿತನಿಗೆ ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮದಡಿಯಲ್ಲಿ ಉಲ್ಲೇಖಿಸಿರುವಂತೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಕೋರಿರುತ್ತಾರೆ.

34. **ಆರೋಪಿತನ ಪರ ವಕೀಲರು** ತಮ್ಮ ವಾದ ಮಂಡನೆಯ ಕಾಲದಲ್ಲಿ ಈ ಪ್ರಕರಣದಲ್ಲಿ ಆರೋಪಿತನನ್ನು ರೈಲ್ವೇ ಆರಕ್ಷಕ ಠಾಣೆಯ ಎಎಸ್ಐ ಇವರ ಸಮಕ್ಷಮ ಹಾಜರುಪಡಿಸಿದ ಸಮಯದಲ್ಲಿ ಆರೋಪಿತನಿಗೆ ಅಂಗಶೋಧನೆ ಬಗ್ಗೆ ಇರುವ ಹಕ್ಕಿನ ಬಗ್ಗೆ ತಿಳಿಸಿ, ಅವರಿಗೆ ಲಿಖಿತವಾಗಿ ಪತ್ರಾಂಕಿತ ಅಧಿಕಾರಿಯ ಮೂಲಕ ಲಿಖಿತವಾಗಿ ನೋಟೀಸು ಕೊಟ್ಟು, ಲಿಖಿತವಾಗಿ ಒಪ್ಪಿಗೆ ಪಡೆದುಕೊಂಡ ಬಗ್ಗೆ ಯಾವುದೇ ದಾಖಲೆ ನ್ಯಾಯಾಲಯದ ಮುಂದಿರುವುದಿಲ್ಲ ಎಂದು ಹೇಳಿರುತ್ತಾರೆ. ಮುಂದುವರೆದು ವಾದ ಮಂಡಿಸುತ್ತಾ, ಇನ್ವೆಂಟರಿ ಮಹಜರು ಜರುಗಿಸುವ ಸಮಯ ಛಾಯಾಚಿತ್ರಗಳನ್ನು ತೆಗೆದಿದ್ದರೂ ಸಹ, ಅವುಗಳನ್ನು ತಹಶೀಲ್ದಾರ್ ಇವರಿಂದ ನಿಜವೆಂದು ಪ್ರಮಾಣೀಕರಿಸಿರುವುದಿಲ್ಲ ಎಂದು ಹೇಳಿರುತ್ತಾರೆ. ಮುಂದುವರೆದು ತಮ್ಮ ವಾದವನ್ನು ಮಂಡಿಸುತ್ತಾ, ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 50 ಹಾಗೂ 52-ಎ

ರಡಿಯಲ್ಲಿರುವ ಕಡ್ಡಾಯ ಉಪಬಂಧಗಳನ್ನು ಪಾಲಿಸಲೇ ಬೇಕಾಗಿರುತ್ತದೆ, ಆದರೆ ತನಿಖಾಧಿಕಾರಿಯವರು ಈ ಪ್ರಕರಣದಲ್ಲಿ ಪಾಲಿಸಿರುವುದಿಲ್ಲವೆಂದು ಹೇಳಿರುತ್ತಾರೆ. ತಮ್ಮ ವಾದವನ್ನು ಮಂಡಿಸುತ್ತಾ, ರಾಸಾಯನಿಕ ಪರೀಕ್ಷಾ ವರದಿಯನ್ನು ಪಡೆದುಕೊಳ್ಳಲು, ಅಮಾನತ್ತು ಪಡಿಸಿಕೊಳ್ಳಲಾಗಿದೆ ಎಂದು ಹೇಳಲಾದ ಮಾದರಿ ಗಾಂಜಾವನ್ನು ರಾಸಾಯನಿಕ ಪರೀಕ್ಷೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ವಿಳಂಬವಾಗಿ ಕಳುಹಿಸಿದ್ದು, ಸದರಿ ವಿಳಂಬಕ್ಕೆ ಕಾರಣ ಏನು ಎಂಬ ಬಗ್ಗೆ ಅಭಿಯೋಜನೆಯು ಸೂಕ್ತ ಹಾಗೂ ಸಮಂಜಸ ಕಾರಣವನ್ನು ತಿಳಿಸಿರುವುದಿಲ್ಲ. ಮುಂದುವರೆದು ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ 57 ರಡಿಯಲ್ಲಿ ತನಿಖಾಧಿಕಾರಿಯವರು ತನ್ನ ಪದೀಯ ಹಿರಿಯ ಅಧಿಕಾರಿಗೆ ಆರೋಪಿತನನ್ನು ದಸ್ತಗಿರಿ ಮಾಡಿದ ಬಗ್ಗೆ ಹಾಗೂ ವಶಪಡಿಸಿಕೊಂಡ ಗಾಂಜಾದ ಬಗ್ಗೆ ಯಾವುದೇ ವರದಿಯನ್ನು ನೀಡದೇ ಇರುವುದರಿಂದ, ಇದು ಸಹ ಸದರಿ ಕಾಯಿದೆಯನ್ವಯ ಲೋಪವಾಗಿರುತ್ತದೆ ಎಂದು ಹೇಳಿರುತ್ತಾರೆ. ಆದ್ದರಿಂದ, ಈ ಪ್ರಕರಣದ ತನಿಖೆಯು ಸಂಪೂರ್ಣವಾಗಿ ಲೋಪದೋಷಗಳಿಂದ ಕೂಡಿದ್ದು, ಈ ಪ್ರಕರಣದಲ್ಲಿ ಆರಕ್ಷಕರು ಆರೋಪಿತನಿಂದ ನಿಶಾನೆ ಪಿ- 3 ಪಂಚನಾಮೆಯ ಮುಖೇನ ಒಟ್ಟು 6 ಕೆಜಿ 220 ಗ್ರಾಂ ಗಾಂಜಾವನ್ನು ವಶಪಡಿಸಿಕೊಂಡಿರುತ್ತಾರೆಯೇ ಎಂಬ ಬಗ್ಗೆ ಸಂಶಯ ಮೂಡುತ್ತದೆ, ಆದ್ದರಿಂದ, ಸಂಶಯದ ಲಾಭವನ್ನು ಆರೋಪಿತನು ಪಡೆಯಲು ಅರ್ಹನಿದ್ದು, ಕಾರಣ ಆರೋಪಿತನನ್ನು ಈ ಪ್ರಕರಣದಲ್ಲಿ ಹೊರಿಸಿರುವ ಆಪಾದನೆಯಿಂದ ಖುಲಾಸೆಗೊಳಿಸ ಬೇಕೆಂದು ಕೋರಿಕೊಂಡಿರುತ್ತಾರೆ.

35. ಉಭಯಪಕ್ಷಗಾರರ ವಾದವನ್ನು ಕೇಳಿದಾಗ ಮತ್ತು ಅಭಿಯೋಜನೆಯು ಹಾಜರು ಪಡಿಸಿದ ಮೌಖಿಕ ಹಾಗೂ ದಾಖಲಾತಿಗಳ ಸಾಕ್ಷ್ಯವನ್ನು ಪರಿಶೀಲಿಸಿದಾಗ, ಅಭಿಯೋಜನೆಯು

ಆರೋಪಿತನ ಮೇಲೆ ಹೊರಿಸಲಾಗಿರುವ ಆಪಾದನೆಯನ್ನು ಯಾವುದೇ ಅನುಮಾನಕ್ಕೆ ಅವಕಾಶವಿಲ್ಲದಂತೆ ಸಾಬೀತುಪಡಿಸಿರುತ್ತಾರೆಯೇ ಎಂಬುದು ಈ ನ್ಯಾಯಾಲಯವು ಪರಿಗಣನೆಗೆ ತೆಗೆದುಕೊಳ್ಳಬೇಕಾದ ಅಂಶವಾಗಿರುತ್ತದೆ. ಅದಲ್ಲದೇ, ಆರೋಪಿತನು ಗಾಂಜಾವನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ ಸಲುವಾಗಿ ₹ 6,22,000/- ಮೌಲ್ಯದ 6 ಕೆಜಿ 220 ಗ್ರಾಂಗಳಷ್ಟು ಗಾಂಜಾವನ್ನು ಸ್ವಾಧೀನ ಹೊಂದಿ ಹಂಪಿ ಎಕ್ಸಪ್ರೆಸ್ ರೈಲು ಗಾಡಿಯಲ್ಲಿ ಸಾಗಾಣಿಕೆ ಮಾಡುತ್ತಿದ್ದನು, ಅದನ್ನು ಆರಕ್ಷಕರು ನಿಶಾನೆ ಪಿ- 3 ಪಂಚನಾಮೆ ಮುಖೇನ ಪಶಪಡಿಸಿಕೊಂಡಿರುತ್ತಾರೆ ಎಂದು ನಿಸ್ಸಂಶಯವಾಗಿ ಸಾಬೀತು ಪಡಿಸಬೇಕಾಗುತ್ತದೆ.

36. ಈ ಹಂತದಲ್ಲಿ, ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 50 ಮತ್ತು 52 ಎ ರಡಿಯಲ್ಲಿ ಹೇಳಿರುವ ಪ್ರಮುಖ ಅಂಶಗಳು ಮತ್ತು ಕಡ್ಡಾಯ ನಿಯಮಗಳ ಉದ್ಧೃತ ಭಾಗವನ್ನು ಹೊರತೆಗೆಯುವುದು ಸೂಕ್ತ ಮತ್ತು ಸಮಂಜಸವಾಗಿದೆ ಎಂದು ನಾನು ಅಭಿಪ್ರಾಯಪಟ್ಟಿದ್ದೇನೆ. ಅವು ಈ ಕೆಳಕಾಣಿಸಿದಂತಿರುತ್ತವೆಃ-

**50. <u>ವ್ಯಕ್ತಿಗಳ ಶೋಧನೆ ಮಾಡಬೇಕಾದಾಗಿನ ಷರತ್ತುಗಳು-</u>**

> (1) 42 ನೇ ಪ್ರಕರಣದ ಮೇರೆಗೆ ಅಧಿಕಾರ ಪಡೆದ ಅಧಿಕಾರಿಯು 41 ನೇ ಪ್ರಕರಣದ, 42 ನೇ ಪ್ರಕರಣದ ಅಥವಾ 43 ನೇ ಪ್ರಕರಣದ ಮೇರೆಗೆ ಯಾವುದೇ ವ್ಯಕ್ತಿಯನ್ನು ಶೋಧಿಸಬೇಕಾಗಿರುವಲ್ಲಿ, ಅಂಥ ವ್ಯಕ್ತಿಯು ಅಗತ್ಯಪಡಿಸಿದರೆ, ಯಾವುದೇ ಅನಗತ್ಯ ವಿಳಂಬವಿಲ್ಲದೆ ಆತನನ್ನು 42 ನೇ ಪ್ರಕರಣದಲ್ಲಿ ಹೇಳಲಾಗಿರುವ ಇಲಾಖೆಗಳ ಯಾವನೇ ಗಜೆಟೆಡ್ ಅಧಿಕಾರಿಯ, ಅತಿಸನಿಹದ ಯಾವನೇ ದಂಡಾಧಿಕಾರಿಯ ಹತ್ತಿರ ಕರೆದುಕೊಂಡು ಹೋಗತಕ್ಕದ್ದು.

(2) ಅಂಥ ವಿನಂತಿಯನ್ನು ಮಾಡಿಕೊಂಡರೆ, ಆತನನ್ನು ಗೆಜೆಟೆಡ್ ಅಧಿಕಾರಿಯ ಅಥವಾ (1)ನೇ ಉಪ-ಪ್ರಕರಣದಲ್ಲಿ ಹೇಳಲಾಗಿರುವ ದಂಡಾಧಿಕಾರಿಯ ಹತ್ತಿರ ಕರೆದುಕೊಂಡು ಹೋಗುವವರೆಗೆ ಆತನನ್ನು ತಡೆಹಿಡಿದಿಟ್ಟುಕೊಳ್ಳಬಹುದು.

(3) ಅಂಥ ವ್ಯಕ್ತಿಯನ್ನು ತನ್ನ ಮುಂದೆ ಹಾಜರುಪಡಿಸಲಾಗಿರುವ ಗೆಜೆಟೆಡ್ ಅಧಿಕಾರಿಗೆ ಅಥವಾ ದಂಡಾಧಿಕಾರಿಗೆ, ಆತನನ್ನು ಶೋಧನೆ ಮಾಡಲು ಯುಕ್ತ ಆಧಾರವಿಲ್ಲವೆಂದು ಕಂಡಬಂದರೆ ಆತನನ್ನು ಕೂಡಲೇ ಬಿಡುಗಡೆ ಮಾಡಲು ಆದೇಶಿಸಬಹುದು, ಹಾಗಿಲ್ಲದಿರುವಾಗ ಶೋಧನೆ ಮಾಡಲು ನಿರ್ದೇಶನ ಮಾಡತಕ್ಕದ್ದು.

4) ಯಾವುದೇ ಮಹಿಳೆಯನ್ನು, ಮಹಿಳೆಯನ್ನು ಹೊರತುಪಡಿಸಿ ಇತರ ಯಾರೇ ಶೋಧಿಸತಕ್ಕದ್ದಲ್ಲ.

(5) 42 ನೇ ಪ್ರಕರಣದ ಮೇರೆಗೆ ಕ್ರಮಬದ್ಧವಾಗಿ ಅಧಿಕೃತಗೊಳಿಸಲಾದ ಅಧಿಕಾರಿಯು ನಂಬಲು ಕಾರಣವಿರುವ ಯಾವುದೇ ಮಾದಕ ಔಷಧಿ ಅಥವಾ ಮನೋಪರಿಣಾಮಕ ವಸ್ತು ಅಥವಾ ನಿಯಂತ್ರಿತ ವಸ್ತು ಅಥವಾ ದಸ್ತಾವೇಜಿನ ಸ್ವಾಧೀನವನ್ನು ಬಿಟ್ಟುಕೊಡುವುದಕ್ಕೆ ಶೋಧಿಸಬೇಕಾದ ವ್ಯಕ್ತಿಯ ಸಾಧ್ಯತೆಯಿಲ್ಲದೆ ಹತ್ತಿರದ ರಾಜ್ಯ ಪತ್ರಾಂಕಿತ ಅಧಿಕಾರಿ ಅಥವಾ ಮ್ಯಾಜಿಸ್ಟ್ರೇಟನಿಗೆ ಶೋಧಿಸಬೇಕೆಂದು ವ್ಯಕ್ತಿಯನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲದಿರುವಾಗ, ಆತನು ಹತ್ತಿರದ ರಾಜ್ಯ ಪತ್ರಾಂಕಿತ ಅಧಿಕಾರಿ ಅಥವಾ ಮ್ಯಾಜಿಸ್ಟ್ರೇಟನಿಗೆ ಅಂಥ ವ್ಯಕ್ತಿಯನ್ನು ತೆಗೆದುಕೊಂಡು ಹೋಗುವ ಬದಲಾಗಿ ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2) ರ 100 ನೇ ಪ್ರಕರಣದ ಮೇರೆಗೆ ಉಪಬಂಧಿಸಿದಂತೆ ವ್ಯಕ್ತಿಯನ್ನು ಶೋಧಿಸಲು ಮುಂದುವರಿಯಬಹುದು.

(6) (5)ನೇ ಉಪ-ಪ್ರಕರಣದ ಮೇರೆಗೆ ನಡೆಸಲಾಗಿರುವ ಶೋಧನೆಯ ತರುವಾಯ ಅಧಿಕಾರಿಯು ಯಾವ ವಿಶ್ವಾಸವು ಅಂಥ ಶೋಧನೆಯನ್ನು ಅನಿವಾರ್ಯ ಮಾಡಿದೆಯೋ ಆ ವಿಶ್ವಾಸಕ್ಕಾಗಿ ಕಾರಣಗಳನ್ನು ದಾಖಲು

ಮಾಡತಕ್ಕದ್ದು ಮತ್ತು ಎಪ್ಪತ್ತೆರಡು ಗಂಟೆಯೊಳಗೆ ಅದರ ಪ್ರತಿಯನ್ನು ತನ್ನ ನಿಕಟ ಮೇಲಾಧಿಕಾರಿಗೆ ಕಳಿಸತಕ್ಕದ್ದು.

**52-ಎ. <u>ವಶಪಡಿಸಿಕೊಂಡ ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ವಿಲೆ-</u>**

(1) ಯಾವುದೇ ಮಾದಕ ಔಷಧಿಗಳು, ಮನೋಪರಿಣಾಮಕ ವಸ್ತುಗಳ, ನಿಯಂತ್ರಿತ ವಸ್ತುಗಳ ಅಥವಾ ಸಾಗಣೆ ವಾಹನಗಳಿಗೆ ಸಂಬಂಧಿಸಿದ ಅಪಾಯಕಾರಿ ಸ್ವರೂಪ, ಕಳವು ಮಾಡಬಹುದಾಗಿರುವ, ಬದಲಿಗೆ ಸೇರಿಸಬಹುದಾಗಿರುವ, ಯುಕ್ತ ಸಂಗ್ರಹಣೆಗೆ ಜಾಗದ ಅಭಾವ ಅಥವಾ ಇತರ ಯಾವುದೇ ಸುಸಂಬದ್ಧ ಪರ್ಯಾಲೋಚನೆಯನ್ನು ಗಮನಿಸಿ ಕೇಂದ್ರ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯ ಮೂಲಕ ಅಂಥ ಮಾದಕ ಔಷಧಗಳು, ಮನೋಪರಿಣಾಮಕ ವಸ್ತುಗಳು, ನಿಯಂತ್ರಿತ ವಸ್ತುಗಳು ಅಥವಾ ಸಾಗಣೆ ವಾಹನಗಳು ಅಥವಾ ಮಾದಕ ಔಷಧಿಗಳ ವರ್ಗ, ಮನೋಪರಿಣಾಮಕ ವಸ್ತುಗಳ ವರ್ಗ, ನಿಯಂತ್ರಿತ ವಸ್ತುಗಳ ವರ್ಗ ಅಥವಾ ಸಾಗಣೆ ವಾಹನಗಳನ್ನು ಅವುಗಳನ್ನು ವಶಪಡಿಸಿಕೊಂಡ ಕೂಡಲೇ ಸಾಧ್ಯವಾದಷ್ಟು ಬೇಗನೆ ಸರ್ಕಾರವು ಈ ಕೆಳಗೆ ಗೊತ್ತುಪಡಿಸಲಾದ ಕ್ರಮವನ್ನು ಅನುಸರಿಸಿ ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಅಧಿಕಾರಿಯು ಮತ್ತು ಯಾವ ರೀತಿಯಲ್ಲಿ ವಿಲೆ ಮಾಡತಕ್ಕದ್ದು ಎಂದು ಅವುಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

(2) ಯಾವುದೇ ಮಾದಕ ಔಷಧಿಗಳನ್ನು ಅಥವಾ ಮನೋಪರಿಣಾಮಕ ವಸ್ತುವನ್ನು, ನಿಯಂತ್ರಿತ ವಸ್ತುವನ್ನು ಅಥವಾ ಸಾಗಣೆ ವಾಹನವನ್ನು ವಶಪಡಿಸಿಕೊಳ್ಳಲಾಗಿರುವಲ್ಲಿ ಮತ್ತು ಅತ್ಯಂತ ಸಮೀಪದ ಪೊಲೀಸು ಠಾಣೆಯ ಠಾಣಾ ಅಮಲ್ದಾರನಿಗೆ ಅಥವಾ 53 ನೇ ಪ್ರಕರಣದ ಮೇರೆಗೆ ಅಧಿಕಾರ ಪಡೆದ ಅಧಿಕಾರಿಗೆ ಕಳಿಸಿದಾಗ, (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಅಧಿಕಾರಿಯು ಅಂಥ ಮಾದಕ ಔಷಧಗಳು ಅಥವಾ ಮನೋಪರಿಣಾಮಕ ವಸ್ತುಗಳ ಶೋಧನಾ ಯಾದಿಯನ್ನು, ಅವುಗಳ ವರ್ಣನೆ, ಗುಣಮಟ್ಟ, ಪ್ರಮಾಣ, ಪ್ಯಾಕು ಮಾಡಲಾದ ರೀತಿ, ಗುರುತುಗಳು, ಅಂಕಿಗಳು ಅಥವಾ ಮಾದಕ ಔಷಧಗಳ ಅಥವಾ

ಮನೋಪರಿಣಾಮಕ ವಸ್ತುಗಳನ್ನು ಗುರುತಿಸುವ ಇತರ ಯಾವುದೇ ವಿವರಗಳು ಅಥವಾ ಅವುಗಳನ್ನು ಪ್ಯಾಕು ಮಾಡಲಾಗಿರುವ ಪ್ಯಾಕಿಂಗ್ ಮೂಲದೇಶ ಮತ್ತು (1)ನೇ ಉಪ-ಪ್ರಕರಣದಲ್ಲಿ ಹೇಳಲಾಗಿರುವ ಅಧಿಕಾರಿಯು ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ಮಾದಕ ಔಷಧಗಳ, ಮನೋಪರಿಣಾಮಕ ವಸ್ತುಗಳ, ನಿಯಂತ್ರಿತ ವಸ್ತುಗಳ ಅಥವಾ ಸಾಗಣೆ ವಾಹನಗಳ ಗುರುತಿಗಾಗಿ ತಾನು ಸುಸಂಬದ್ಧವೆಂದು ಪರ್ಯಾಲೋಚಿಸುವ ಇತರೆ ವಿವರಗಳು- ಎಲ್ಲವನ್ನು ಒಳಗೊಂಡಂತೆ ತಯಾರಿಸತಕ್ಕದ್ದು ಮತ್ತು ಯಾವನೇ ದಂಡಾಧಿಕಾರಿಗೆ-

(ಎ) ಹಾಗೆ ತಯಾರಿಸಲಾಗಿರುವ ಶೋಧನಾ ಯಾದಿಯ ಸತ್ಯತೆಯನ್ನು ಪ್ರಮಾಣೀಕರಿಸುವ; ಅಥವಾ

(ಬಿ) ಅಂಥ ದಂಡಾಧಿಕಾರಿಯ ಸಮಕ್ಷಮದಲ್ಲಿ ಅಂಥ ಔಷಧಿಗಳ, ವಸ್ತುಗಳ ಅಥವಾ ಸಾಗಣೆ ವಾಹನಗಳ ಛಾಯಾಚಿತ್ರಗಳನ್ನು ತೆಗೆದುಕೊಳ್ಳುವುದು ಮತ್ತು ಅಂಥ ಛಾಯಾಚಿತ್ರಗಳು ನಿಜವಾದವುಗಳೆಂದು ಪ್ರಮಾಣೀಕರಿಸುವ; ಅಥವಾ

(ಸಿ) ಅಂಥ ದಂಡಾಧಿಕಾರಿಯ ಸಮಕ್ಷಮದಲ್ಲಿ ಅಂಥ ಔಷಧಿಗಳ ಅಥವಾ ವಸ್ತುಗಳ ಪ್ರಾತಿನಿಧಿಕ ಸ್ಯಾಂಪಲ್‌ಗಳನ್ನು ತೆಗೆದುಕೊಳ್ಳಲು ಅನುಮತಿಸುವುದು ಮತ್ತು ಹಾಗೆ ತಯಾರಿಸಲಾದ ಅಂಥ ಸ್ಯಾಂಪಲ್‌ಗಳ ಯಾದಿಯ ಸತ್ಯತೆಯನ್ನು ಪ್ರಮಾಣೀಕರಿಸುವ ಉದ್ದೇಶಗಳಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(3) (2)ನೇ ಉಪ-ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಲಾಗಿರುವಲ್ಲಿ ಆ ದಂಡಾಧಿಕಾರಿಯು ಸಾಧ್ಯವಾದಷ್ಟು ಬೇಗನೆ ಆ ಅರ್ಜಿಯನ್ನು ಮಂಜೂರು ಮಾಡತಕ್ಕದ್ದು.

(4) ಭಾರತ ಸಾಕ್ಷ್ಯ ಅಧಿನಿಯಮ, 1873 ರಲ್ಲಿ ಅಥವಾ ದಂಡ ಪ್ರಕ್ರಿಯಾ ಸಂಹಿತೆಯ, 1973 ರಲ್ಲಿ ಏನನ್ನೇ ಹೇಳಲಾಗಿರುವಾಗ್ಯೂ ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಅಧಿವಿಚಾರಣೆ

ಮಾಡುವ ಪ್ರತಿಯೊಂದು ನ್ಯಾಯಾಲಯವು ಶೋಧನಾ ಯಾದಿಯನ್ನು ಮಾದಕ ಔಷಧಿಗಳ, ಮನೋಪರಿಣಾಮಕ ವಸ್ತುಗಳು, ನಿಯಂತ್ರಿತ ವಸ್ತುಗಳ ಅಥವಾ ಸಾಗಣೆ ವಾಹನಗಳ ಛಾಯಾಚಿತ್ರಗಳನ್ನು ಮತ್ತು (2)ನೇ ಉಪ-ಪ್ರಕರಣದ ಮೇರೆಗೆ ತಯಾರಿಸಲಾದ ಮತ್ತು ದಂಡಾಧಿಕಾರಿಯಿಂದ ಪ್ರಮಾಣೀಕರಿಸಲಾದ ಸ್ಯಾಂಪಲ್‌ಗಳ ಯಾವುದೇ ಯಾದಿಯನ್ನು ಅಂಥ ಅಪರಾಧಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಸಾಕ್ಷ್ಯವೆಂದು ಭಾವಿಸತಕ್ಕದ್ದು.

37. ಈ ಪ್ರಕರಣದಲ್ಲಿನ ದಾಖಲಾತಿಗಳನ್ನು ಮತ್ತು ಪ್ರಾಸಾ- 1 ರವರು ನುಡಿದ ಸಾಕ್ಷವನ್ನು ಕೂಲಂಕುಷವಾಗಿ ಗಮನಿಸಿದಾಗ ಈ ಪ್ರಕರಣದಲ್ಲಿ ಆರೋಪಿತನನ್ನು ಚಾಸಾ- 17 ಇವರ ಸಮಕ್ಷಮ ಹಾಜರುಪಡಿಸಿ, ನಿಶಾನೆ ಪಿ- 3 ರಂತೆ ಪಂಚನಾಮೆ ಬರೆದ ನಂತರ, ಪ್ರಾಸಾ- 1 ಇವರು ನೀಡಿದ ನಿಶಾನೆ ಪಿ- 1 ಫಿರ್ಯಾದಿನ ಆಧಾರದ ಮೇರೆಗೆ ಪ್ರಕರಣವನ್ನು ದಾಖಲು ಮಾಡಿರುವುದು ಕಂಡು ಬರುತ್ತದೆ, ಇದು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 154 ರ ಸ್ಪಷ್ಟ ಉಲ್ಲಂಘನೆಯಾಗುತ್ತದೆ. **2016(1) ಕೆಸಿಸಿಆರ್ 47, ಸೂರಜ್ ವಿರುದ್ಧ ಕರ್ನಾಟಕ ರಾಜ್ಯ,** ದಿನಾಂಕ 07/10/2015 ರಂದು ಹೊರಡಿಸಿದ ಈ ತೀರ್ಪಿನಲ್ಲಿ **ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠವು** ಈ ಕೆಳಗಿನಂತೆ ಉಲ್ಲೇಖಿಸಿರುತ್ತದೆಃ-

> **“Investigation proceeded without registration of FIR. Violates Section 154 Cr.P.C. Recovery not established beyond reasonable doubt. On facts held, judgment of conviction not sustainable. Hence set aside. Accused acquitted.”**

38. ಪ್ರಾಸಾ- 1 ರವರು ನುಡಿದ ಸಾಕ್ಷ್ಯವನ್ನು ಗಮನಿಸಿದಾಗ ಇವರು ಆರೋಪಿತನನ್ನು ಚಾಸಾ- 17 (ಪ್ರಾಸಾ- 4) ಇವರ ಸಮಕ್ಷಮ ಹಾಜರುಪಡಿಸಿದ ನಂತರ ಯಾವುದೇ

ಪ್ರಕರಣವನ್ನು ದಾಖಲು ಮಾಡಿಕೊಂಡಿರುವುದಿಲ್ಲ. ಪ್ರಾಸಾ- 1 ರವರ ಸಾಕ್ಷ್ಯವನ್ನು ನೋಡಿದಾಗ ಇವರು ಪಂಚನಾಮೆಯನ್ನು ಜರುಗಿಸಿ, ಗಾಂಜಾವನ್ನು ಅಮಾನತ್ತುಪಡಿಸಿಕೊಂಡ ನಂತರ ನಿಶಾನೆ ಪಿ- 1 ರಂತೆ ಫಿರ್ಯಾದು ನೀಡಿದ ಮೇಲೆ ಪ್ರಾಸಾ- 4 ಇವರು ನಿಶಾನೆ ಪಿ- 12 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿರುತ್ತಾರೆ ಎಂದು ಕಂಡು ಬರುತ್ತದೆ. ಯಾವುದೇ ಒಂದು ಮಾಹಿತಿಯನ್ನು ಸ್ವೀಕರಿಸಿದ ಕೂಡಲೇ, ಅದನ್ನು ಠಾಣಾ ದಿನಚರಿಯಲ್ಲಿ ನಮೂದಿಸಿ, ದಂಡ ಪ್ರಕ್ರಿಯಾ ಸಂಹಿತೆಯ ಕಲಂ 154 ರಡಿಯಲ್ಲಿ ಹೇಳಿರುವಂತೆ ನಿಯಮಗಳನ್ನು ಪಾಲಿಸಿ, ನಂತರ ತನಿಖೆ ಮುಂದುವರೆಸುವುದು ಕ್ರಮವಾಗಿರುತ್ತದೆ. ಆದರೆ, ಈ ಪ್ರಕರಣದಲ್ಲಿ ವಿಳಂಬವಾಗಿ ದೂರು ದಾಖಲು ಮಾಡಿರುವುದು ಕಂಡುಬರುತ್ತದೆ, ಈ ಬಗ್ಗೆ ಯಾವುದೇ ಸೂಕ್ತ ಮತ್ತು ಸಮಂಜಸವಾದ ವಿವರಣೆಯನ್ನು ಅಭಿಯೋಜನೆಯು ನೀಡಿರುವುದಿಲ್ಲ. ಪ್ರಾಸಾ- 4 ಇವರು ತಮ್ಮ ಪಾಟೀ ಸವಾಲಿನ ಸಾಕ್ಷ್ಯದಲ್ಲಿ ಪಂಚನಾಮೆ ಬರೆಯುವ ಮೊದಲು ಪ್ರಥಮ ವರ್ತಮಾನ ವರದಿ ದಾಖಲು ಆಗಿರಲಿಲ್ಲ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ.

39. ಈ ಪ್ರಕರಣದಲ್ಲಿನ ದಾಖಲಾತಿಗಳನ್ನು ಮತ್ತು ಪ್ರಾಸಾ- 1 ರವರು ನುಡಿದ ಸಾಕ್ಷವನ್ನು ಕೂಲಂಕುಷವಾಗಿ ಗಮನಿಸಿದಾಗ ಈ ಪ್ರಕರಣದಲ್ಲಿ ಪ್ರಾಸಾ- 1 ಇವರು ದಿನಾಂಕ 28/04/2024 ರಂದು ರೈಲುಗಾಡಿ ಸಂಖ್ಯೆ 16592 ಹಂಪಿ ಎಕ್ಸ್ ಪ್ರೆಸ್ ರೈಲಿನ ಹಿಂದುಗಡೆ ಇದ್ದ ಜರನಲ್ ಬೋಗಿಯಲ್ಲಿ ಆರೋಪಿತನು ಆಕಾಶ ನೀಲಿ ಮತ್ತು ಕಪ್ಪು ಬಣ್ಣದ ಬಾಗನ್ನು ಹಿಡಿದುಕೊಂಡು ಅನುಮಾನಾಸ್ಪದವಾಗಿ ಕುಳಿತುಕೊಂಡಿದ್ದು, ಆರೋಪಿತನನ್ನು ಸದರಿ ಬ್ಯಾಗಿನಲ್ಲಿ ಏನಿದೆ ಎಂದು ವಿಚಾರಿಸಿದಾಗ ಗಾಂಜಾ ಇದೆ ಎಂದು ಹೇಳಿದ್ದು, ನಂತರ ಪ್ರಾಸಾ- 1 ಇವರು ಬಳ್ಳಾರಿಯ ರೈಲ್ವೇ ಆರಕ್ಷಕ ಠಾಣೆಯಲ್ಲಿ ಠಾಣಾಧಿಕಾರಿಯಾಗಿ ಕರ್ತವ್ಯನಿರ್ವಹಿಸುತ್ತಿದ್ದ

ಸಹಾಯಕ ಆರಕ್ಷಕ ಉಪ- ನಿರೀಕ್ಷಕರು ಅಂದರೆ ಪ್ರಾಸಾ- 4 (ಚಾಸಾ- 17) ಇವರ ಸಮಕ್ಷಮ ಆರೋಪಿ ಮತ್ತು ಸದರಿ ಚೀಲವನ್ನು ಹಾಜರುಪಡಿಸಿದ್ದು, ಸದರಿ ಚೀಲವನ್ನು ತೆರೆದು ನೋಡಿದಾಗ ಅದರಲ್ಲಿ ಖಾಕಿ ಟೇಪ್ ಸುತ್ತಿದ 6 ಬಂಡಲ್ ಗಳು ದೊರೆತವು, ಅವುಗಳನ್ನು ನಿಶಾನೆ ಪಿ- 3 ಪಂಚನಾಮೆ ಮುಖೇನ ಜಪ್ತುಪಡಿಸಿಕೊಳ್ಳಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

40. **2016(1) ಕೆ.ಸಿ.ಸಿ. ಆರ್** 47 ರಲ್ಲಿ ವರದಿಯಾದ **ಸೂರಜ್ ವಿರುದ್ಧ ಕರ್ನಾಟಕ ರಾಜ್ಯ,** ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ (ಧಾರವಾಡ ನ್ಯಾಯಪೀಠ), ಈ ಪ್ರಕರಣದಲ್ಲಿ ಗೌರವಾನ್ವಿತ ನ್ಯಾಯಾಲಯವು ಈ ಕೆಳಗಿನಂತೆ ತೀರ್ಪು ನೀಡಿರುತ್ತದೆಃ-

> ***"NARCOTIC DRUGS AND PSYCHOTROPIC SUBSTANCES ACT, 1985- Section 22(c)- Acquittal- Accused not made aware of his right to be searched either in presence of Gazetted Officer or Magistrate- Amounts to non- compliance of mandatory provisions of Section 50."***

41. ಪತ್ರಾಂಕಿತ ಅಧಿಕಾರಿ ಅಥವಾ ಮ್ಯಾಜಿಸ್ಟ್ರೇಟ್ ಮುಂದೆ ಅಂಗಶೋಧನೆ ಮಾಡಲು ತನ್ನ ಹಕ್ಕನ್ನು ಹೊಂದಿರುವ ಬಗ್ಗೆ ಉದ್ದೇಶಿಸಿರುವ ವ್ಯಕ್ತಿಗೆ ಅಧಿಕಾರ ನೀಡಲಾದ ಅಧಿಕಾರಿಯು ತಿಳಿಸಬೇಕಾದುದು ಮಾದಕ ಔಷಧಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮದ ಕಲಂ 50 ರಡಿಯಲ್ಲಿ ಕಡ್ಡಾಯ ಅವಶ್ಯಕತೆಯಾಗಿದೆ. ಇದು ಕೇವಲ ಔಪಚಾರಿಕವಲ್ಲ, ಆದರೆ ತನಿಖಾಧಿಕಾರಿಯು ಪತ್ರಾಂಕಿತ ಅಧಿಕಾರಿಯ ಮೂಲಕ ಅಂಗಶೋಧನೆಗಾಗಿ ಆರೋಪಿಗಳ ಹಕ್ಕನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು. ಪ್ರಾಸಾ- 1

ಮತ್ತು 4 ರವರ ಸಾಕ್ಷ್ಯವನ್ನು ಗಮನಿಸಿದಾಗ, ಪ್ರಾಸಾ- 1 ಇವರು ಪ್ರಾಸಾ- 4 ಇವರ ಸಮಕ್ಷಮ ಆರೋಪಿತ ಮತ್ತು ಆತನು ಹೊಂದಿದ ಬ್ಯಾಗನ್ನು ಹಾಜರುಪಡಿಸಿದ ನಂತರ, ಪ್ರಾಸಾ- 4 ಇವರು ಆರೋಪಿತನಿಗೆ ಅವರ ಅಂಗಶೋಧನೆಯನ್ನು ಪತ್ರಾಂಕಿತ ಅಧಿಕಾರಿಯವರ ಸಮಕ್ಷಮ ಮಾಡಬಹುದೋ ಅಥವಾ ನ್ಯಾಯಾಧೀಶರ ಸಮಕ್ಷಮ ಮಾಡಬಹುದೋ ಎನ್ನುವ ಬಗ್ಗೆ ಆಯ್ಕೆ/ಅವಕಾಶ ಕೊಟ್ಟಿರುವುದು ಮತ್ತು ಆರೋಪಿತನಿಂದ ಅಂಗಶೋಧನೆ ಮಾಡಲು ಒಪ್ಪಿಗೆ ಪಡೆದಿರುವುದು ಕಂಡುಬರುವುದಿಲ್ಲ. ಆ ಕಾರಣದಿಂದ, ಈ ಪ್ರಕರಣದಲ್ಲಿ ಆರಕ್ಷಕರು ಮಾದಕ ಔಷಧಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 50 ರಡಿಯಲ್ಲಿನ ಕಡ್ಡಾಯ ನಿಂಬಂಧನೆಗಳನ್ನು ಸರಿಯಾದ ಕ್ರಮದಲ್ಲಿ ಅನುಸರಣೆ ಮಾಡದಿರುವುದು ಕಂಡುಬರುತ್ತದೆ .

42. ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 52-A ನ ಉಪ-ಕಲಂ (2) ರಂತೆ, ಯಾವುದೇ ಮಾದಕ ದ್ರವ್ಯಗಳು, ಮನೋಪರಿಣಾಮಕ ವಸ್ತುಗಳು, ನಿಯಂತ್ರಿತ ವಸ್ತುಗಳು ಅಥವಾ ಸಾಗಣೆಗಳನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು ಹತ್ತಿರದ ಆರಕ್ಷಕ ಠಾಣೆಯ ಉಸ್ತುವಾರಿ ಅಧಿಕಾರಿಗೆ ಅಥವಾ ಅವರಿಗೆ ರವಾನಿಸಲಾಗಿದೆ ಎಂದು ಹೇಳಿದರೂ, ಕಲಂ 53 ರ ಅಡಿಯಲ್ಲಿ ಅಧಿಕಾರ ಪಡೆದ ಅಧಿಕಾರಿ, ಉಪ-ಕಲಂ (1) ರಲ್ಲಿ ಉಲ್ಲೇಖಿಸಲಾದ ಅಧಿಕಾರಿಯು ಅಂತಹ ಮಾದಕ ದ್ರವ್ಯಗಳ ದಾಸ್ತಾನು ಸಿದ್ಧಪಡಿಸಬೇಕು, ಮನೋಪರಿಣಾಮಕ ಪದಾರ್ಥಗಳು, ನಿಯಂತ್ರಿತ ವಸ್ತುಗಳು ಅಥವಾ ಅವುಗಳ ವಿವರಣೆ, ಗುಣಮಟ್ಟ, ಪ್ರಮಾಣ, ಪ್ಯಾಕಿಂಗ್ ವಿಧಾನ, ಗುರುತುಗಳು, ಸಂಖ್ಯೆಗಳು ಅಥವಾ ಮಾದಕ ದ್ರವ್ಯಗಳ ಇತರ ಗುರುತಿಸುವ ವಿವರಗಳು, ಮನೋಪರಿಣಾಮಕ ವಸ್ತುಗಳು, ನಿಯಂತ್ರಿತ ವಸ್ತುಗಳು ಅಥವಾ ಸಾಗಣೆಗಳು ಅಥವಾ ಪ್ಯಾಕಿಂಗ್‌ಗೆ ಸಂಬಂಧಿಸಿದ

ವಿವರಗಳನ್ನು ಒಳಗೊಂಡಿರುತ್ತವೆ. ಪ್ಯಾಕ್ ಮಾಡಲಾದ, ಮೂಲಾದೇಶ ಮತ್ತು ಇತರ ವಿವರಗಳನ್ನು ಉಪ-ಕಲಂ (1) ರಲ್ಲಿ ಉಲ್ಲೇಖಿಸಿದ ಅಧಿಕಾರಿಯ ಗುರುತಿಗೆ ಸಂಬಂಧಿತವೆಂದು ಪರಿಗಣಿಸಬಹುದು ಮಾದಕ ದ್ರವ್ಯಗಳು, ಮನೋಪರಿಣಾಮಕ ವಸ್ತುಗಳು, ನಿಯಂತ್ರಿತ ವಸ್ತುಗಳು ಅಥವಾ ಸಾಗಣೆಗಳು, ಈ ಕಾಯಿದೆಯಡಿಯಲ್ಲಿ ಯಾವುದೇ ಪ್ರಕ್ರಿಯೆಯಲ್ಲಿ ಮತ್ತು ಹಾಗೆ ಸಿದ್ಧಪಡಿಸಿದ ದಾಸ್ತಾನು ಸರಿಯಾಗಿದೆ ಎಂದು ಪ್ರಮಾಣೀಕರಿಸುವ ಉದ್ದೇಶಕ್ಕಾಗಿ ಯಾವುದೇ ಮ್ಯಾಜಿಸ್ಟ್ರೇಟ್‌ಗೆ ಅರ್ಜಿ ಸಲ್ಲಿಸುವುದು; ಅಥವಾ ಅಂತಹ ಮ್ಯಾಜಿಸ್ಟ್ರೇಟರ ಸಮ್ಮುಖದಲ್ಲಿ, ಅಂತಹ ಔಷಧಗಳು, ವಸ್ತುಗಳು ಅಥವಾ ಸಾಗಣೆಗಳ ಛಾಯಾಚಿತ್ರಗಳನ್ನು ತೆಗೆದುಕೊಳ್ಳುವುದು ಮತ್ತು ಅಂತಹ ಛಾಯಾಚಿತ್ರಗಳನ್ನು ನಿಜವೆಂದು ಪ್ರಮಾಣೀಕರಿಸುವುದು ಅಥವಾ ಅಂತಹ ಮ್ಯಾಜಿಸ್ಟ್ರೇಟ್ ಸಮ್ಮುಖದಲ್ಲಿ ಅಂತಹ ಔಷಧಿಗಳು ಅಥವಾ ವಸ್ತುಗಳ ಪ್ರತಿನಿಧಿ ಮಾದರಿಗಳನ್ನು ಸೆಳೆಯಲು ಅವಕಾಶ ನೀಡುವುದು ಮತ್ತು ಹಾಗೆ ತಯಾರಿಸಲಾದ ಅಂಥ ಮಾದರಿಗಳ ಯಾದಿಯ ಸತ್ಯತೆಯನ್ನು ಪ್ರಮಾಣೀಕರಿಸುವುದು. ಅದಲ್ಲದೇ ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 52-A ನ ಉಪ-ಕಲಂ 2 ರ ಕಡ್ಡಾಯ ನಿಬಂಧನೆಗಳ ಅನುಸರಣೆಗೆ ಪತ್ರಾಂಕಿತ ಅಧಿಕಾರಿಯ ಉಪಸ್ಥಿತಿಯಲ್ಲಿ ಕೇವಲ ಮಾದರಿಯನ್ನು ತೆಗೆದಿರಿಸುವುದು ಸಾಕಾಗುವುದಿಲ್ಲ.

43. **2023 ಐಎನ್ ಎಸ್ ಸಿ 634** ರಲ್ಲಿ ವರದಿಯಾದ **ಮಾಂಗಿಲಾಲ್ ವಿರುದ್ಧ ಮಧ್ಯಪ್ರದೇಶ ರಾಜ್ಯ** ಪ್ರಕರಣದಲ್ಲಿ, **ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು** "ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 52A ಸಾಕ್ಷ್ಯದ ಕಡ್ಡಾಯ ನಿಯಮವಾಗಿದೆ" ಎಂದು ಗಮನಿಸಿದೆ. ಸದರಿ ತೀರ್ಪಿನ ವಾಕ್ಯಪರಿಚ್ಛೇದ ಸಂಖ್ಯೆ 5 ಮತ್ತು 6 ರಲ್ಲಿ ಇದನ್ನು ಈ ಕೆಳಗಿನಂತೆ ಗಮನಿಸಲಾಗಿದೆ:-

***"5. Sub-section (2) of Section 52A of the NDPS Act mandates a competent officer to prepare an inventory of such narcotic drugs with adequate particulars. This has to be followed through an appropriate application to the Magistrate concerned for the purpose of certifying the correctness of inventory, taking relevant photographs in his presence and certifying them as true or taking drawal of samples in his presence with due certification. Such an application can be filed for anyone of the aforesaid three purposes. The objective behind this provision is to have an element of supervision by the magistrate over the disposal of seized contraband. Such inventories, photographs and list of samples drawn with certification by Magistrates would constitute as a primary evidence. Therefore, when there is non-compliance of Section 52A of the NDPS Act, where a certification of a magistrate is lacking any inventory, photograph or list of samples would not constitute primary evidence.***

***6. The obvious reason behind this provision is to inject fair play in the process of investigation. Section 52A of the NDPS Act is a mandatory rule of evidence which requires the physical presence of a Magistrate followed by an order facilitating his approval either for certifying an inventory or***

> ***for a photograph taken apart from list of samples drawn."***

44. **2024 ಸಿಆರ್. ಆರ್ 497 (ಎಸ್.ಸಿ.)** ನಲ್ಲಿ ವರದಿ ಮಾಡಲಾದ **ಮೊಹಮ್ಮದ್ ಖಾಲಿದ್ ಮತ್ತು ಇನ್ನೊಬ್ಬರು ವಿರುದ್ಧ ತೆಲಂಗಾಣ ರಾಜ್ಯ**, ಈ ಪ್ರಕರಣದಲ್ಲಿ ಭಾರತದ ಗೌರವಾನ್ವಿತ **ಸರ್ವೋಚ್ಚ ನ್ಯಾಯಾಲಯವು** ಈ ಕೆಳಗಿನಂತೆ ಗಮನಿಸಿದೆ:-

> ***"No proceedings under Section 52A of NDPS Act were undertaken by Investigating Officer for preparing Inventory and obtaining Samples in presence of jurisdictional Magistrate. Independent Pancha witnesses were not examined. Prosecution failed to prove required link evidence to satisfy Court regarding safe custody of sample packets from time of seizure till same reached FSL."***

45. ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 52 ಎ ಉಪ-ಕಲಂ (2) ಅಂತಹ ಮಾದಕ ದ್ರವ್ಯಗಳ ದಾಸ್ತಾನು ಸಾಕಷ್ಟು ವಿವರಗಳೊಂದಿಗೆ ಸಿದ್ಧಪಡಿಸಲು ಸಮರ್ಥ ಅಧಿಕಾರಿಯನ್ನು ಕಡ್ಡಾಯಗೊಳಿಸುತ್ತದೆ. ದಾಸ್ತಾನು ಸರಿಯಾಗಿದೆಯೇ ಎಂದು ಪ್ರಮಾಣೀಕರಿಸುವ ಉದ್ದೇಶಕ್ಕಾಗಿ ಸಂಬಂಧಪಟ್ಟ ಮ್ಯಾಜಿಸ್ಟ್ರೇಟ್‌ಗೆ ಸೂಕ್ತವಾದ ಅರ್ಜಿಯ ಮೂಲಕ ಇದನ್ನು ಅನುಸರಿಸಬೇಕು, ಅವರ ಉಪಸ್ಥಿತಿಯಲ್ಲಿ ಸಂಬಂಧಿತ ಛಾಯಾಚಿತ್ರಗಳನ್ನು ತೆಗೆದುಕೊಂಡು ಅವುಗಳನ್ನು ನಿಜವೆಂದು ಪ್ರಮಾಣೀಕರಿಸುವುದು ಅಥವಾ ಸರಿಯಾದ ಪ್ರಮಾಣೀಕರಣದೊಂದಿಗೆ ಅವರ ಉಪಸ್ಥಿತಿಯಲ್ಲಿ ಮಾದರಿಗಳನ್ನು ತೆಗೆದುಕೊಳ್ಳಬೇಕು. ಈ ನಿಬಂಧನೆಯ ಹಿಂದಿನ ಉದ್ದೇಶವು

ವಶಪಡಿಸಿಕೊಂಡ ನಿಷಿದ್ಧ ವಸ್ತುಗಳ ವಿಲೇವಾರಿ ಮೇಲೆ ಮ್ಯಾಜಿಸ್ಟ್ರೇಟ್‌ನಿಂದ ಮೇಲ್ವಿಚಾರಣೆಯ ಅಂಶವನ್ನು ಹೊಂದಿರುವುದು. ಅಂತಹ ದಾಸ್ತಾನುಗಳು, ಛಾಯಾಚಿತ್ರಗಳು ಮತ್ತು ಮ್ಯಾಜಿಸ್ಟ್ರೇಟ್ ಇವರು ಪ್ರಮಾಣೀಕರಿಸಿದ ಮಾದರಿಗಳ ಪಟ್ಟಿಯನ್ನು ಪ್ರಾಥಮಿಕ ಸಾಕ್ಷ್ಯವಾಗಿ ರೂಪಿಸಲಾಗುತ್ತದೆ. ಆದ್ದರಿಂದ, ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 52A ಅನುಸರಣೆ ಇಲ್ಲದಿದ್ದಾಗ, ಮ್ಯಾಜಿಸ್ಟ್ರೇಟ್‌ನ ಪ್ರಮಾಣೀಕರಣವು ಯಾವುದೇ ದಾಸ್ತಾನು, ಛಾಯಾಚಿತ್ರ ಅಥವಾ ಮಾದರಿಗಳ ಪಟ್ಟಿಯನ್ನು ಹೊಂದಿರದಿದ್ದಲ್ಲಿ ಪ್ರಾಥಮಿಕ ಸಾಕ್ಷ್ಯವೆಂದು ಪರಿಗಣಿಸಲು ಬರುವುದಿಲ್ಲ.

46. ಈ ಪ್ರಕರಣದಲ್ಲಿ ಅಭಿಯೋಜನೆಯ ಪ್ರಕಾರ, ದಿನಾಂಕ 28/04/2024 ರಂದು ರಂದು ಜಪ್ತುಪಡಿಸಿಕೊಂಡ ಗಾಂಜಾದ ಇನ್ವೆಂಟರಿಯನ್ನು ಚಾಸಾ- 16 ಇವರ ಸಮಕ್ಷಮ ಜರುಗಿಸಲಾಗಿದೆ ಎಂದಾಗಿರುತ್ತದೆ. ಈ ಪ್ರಕರಣದಲ್ಲಿ ಅಭಿಯೋಜನೆಯು ಚಾಸಾ- 16 ಇವರನ್ನು ಪ್ರಾಸಾ- 3 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದೆ. ಪ್ರಾಸಾ- 3 ಇವರು ನುಡಿದ ಸಾಕ್ಷ್ಯವನ್ನು ಗಮನಿಸಿದಾಗ ಇವರು ರೈಲ್ವೇ ಆರಕ್ಷಕ ಠಾಣೆಯವರು ದಿನಾಂಕ 28/04/2024 ರಂದು ನಿಶಾನೆ ಪಿ- 8 ರಂತೆ ಮನವಿ ಪತ್ರ ಸಲ್ಲಿಸಿ ಜಪ್ತುಪಡಿಸಿಕೊಂಡ ಗಾಂಜಾದ ಇನ್ವೆಂಟರಿ ಮಾಡಲು ಕೇಳಿಕೊಂಡ ಮೇರೆಗೆ ಪ್ರಾಸಾ-3 ಇವರು ದಿನಾಂಕ 02/05/2024 ರಂದು ಇನ್ವೆಂಟರಿ ಕ್ರಮ ಜರುಗಿಸಿರುವುದು, ನಿಶಾನೆ ಪಿ- 9 ರಂತೆ ಇನ್ವೆಂಟರಿ ಪಂಚನಾಮೆ ಬರೆದಿರುವುದು, ನಿಶಾನೆ ಪಿ- 10 ರಂತೆ ಅನೆಕ್ಷರ್-1, ಸರ್ಟಿಫಿಕೇಟ್, ತಪಶೀಲು ಪಟ್ಟಿ, ಮಾದರಿ ಸೀಲು ಒದಗಿಸಿರುವುದು, ನಿಶಾನೆ ಪಿ- 11 ರಂತೆ ರಂತೆ ಛಾಯಾಚಿತ್ರ ತೆಗೆದಿರುವುದು ಮತ್ತು ಮು.ಮಾ- 5 ರಿಂದ 10 ರಂತೆ ಮಾದರಿಗಾಗಿ ಗಾಂಜಾವನ್ನು ತೆಗೆದಿರಿಸಿರುವುದು ಕಂಡುಬರುತ್ತದೆ. ಅದಲ್ಲದೇ ಇನ್ವೆಂಟರಿಯನ್ನು ಪ್ರಾಸಾ- 5 ಸ್ವತಂತ್ರ ಸಾಕ್ಷಿದಾರರ ಸಮಕ್ಷಮ

ಜರುಗಿಸಲಾಗಿರುತ್ತದೆ. ಆದರೆ, ಇನ್ವೆಂಟರಿ ಸಮಯ ತೆಗೆದ ಛಾಯಾಚಿತ್ರಕ್ಕೆ ಅದು ನಿಜವೆಂದು ತಹಶೀಲ್ದಾರ್ ಇವರಿಂದ ಪ್ರಮಾಣೀಕರಿಸಲಾಗಿದೆ ಎಂದು ತೋರಿಸಲು ಯಾವುದೇ ಸಾಕ್ಷ್ಯ ನ್ಯಾಯಾಲಯದ ಮುಂದಿರುವುದಿಲ್ಲ. ಪ್ರಾಸಾ- 3 ಇವರು ತಮ್ಮ ಪಾಟೀ ಸವಾಲಿನ ಸಾಕ್ಷ್ಯದಲ್ಲಿ ಇನ್ವೆಂಟರಿ ಪಂಚನಾಮೆಗೆ ಹಾಜರಾದ ಚಾಸಾ- 4 ಮತ್ತು 5 ಇವರಿಗೆ ತಾನು ನೋಟೀಸು ಕೊಟ್ಟಿಲ್ಲ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಆದ್ದರಿಂದ, ಅಭಿಯೋಜನೆಯು ನಿಶಾನೆ ಪಿ- 9 ರಂತೆ ಇನ್ವೆಂಟರಿ ಪಂಚನಾಮೆ ಬರೆಯಲಾಗಿದೆ, ನಿಶಾನೆ ಪಿ- 10 ರಂತೆ ಇನ್ವೆಂಟರಿ ವರದಿ ಪಡೆಯಲಾಗಿದೆ, ನಿಶಾನೆ ಪಿ- 11 ರಂತೆ ಛಾಯಾಚಿತ್ರವನ್ನು ತೆಗೆಯಲಾಗಿದೆ ಮತ್ತು ಮು.ಮಾ- 5 ರಿಂದ 10 ರಂತೆ ಮಾದರಿಗಾಗಿ ಗಾಂಜಾವನ್ನು ತೆಗೆದಿರಿಸಲಾಗಿದೆ ಎಂದ ಮಾತ್ರಕ್ಕೆ ಆರಕ್ಷಕರು ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 52-A ರಡಿಯಲ್ಲಿ ಹೇಳಿರುವ ಕಡ್ಡಾಯ ನಿಬಂಧನೆಗಳನ್ನು ಅನುಸರಿಸಿದ್ದಾರೆ ಎಂದು ಪರಿಗಣಿಸಲು ಬರುವುದಿಲ್ಲ. ಅದಲ್ಲದೇ, ಇನ್ವೆಂಟರಿ ಮಾಡಿಸುವ ಕಾಲಕ್ಕೆ ಅನುಸರಿಸಬೇಕಾದ ನಿಯಮಗಳನ್ನು ಸರಿಯಾದ ಕ್ರಮದಲ್ಲಿ ಪಾಲನೆ ಮಾಡದೇ ಇರುವುದು ಅಭಿಯೋಜನೆಯ ಪ್ರಕರಣಕ್ಕೆ ಮಾರಕವಾಗಿರುತ್ತದೆ.

47. ನಿಶಾನೆ ಪಿ- 9 ಇನ್ವೆಂಟರಿ ಪಂಚನಾಮೆ ಹಾಗೂ ನಿಶಾನೆ ಪಿ- 10 ಅನೆಕ್ಷರ್-1 ಮತ್ತು 2 ತಪಶೀಲು ಪಟ್ಟಿಯನ್ನು ನೋಡಿದಾಗ ದಿನಾಂಕ 02/05/2024 ರಂದು ಚಾಸಾ- 16 (ಪ್ರಾಸಾ- 3) ಇವರ ಸಮಕ್ಷಮ ಅಮಾನತ್ತುಪಡಿಸಿಕೊಂಡ ಗಾಂಜಾದ ಇನ್ವೆಂಟರಿ ಕ್ರಮ ಜರುಗಿಸಲಾಗಿರುತ್ತದೆ ಎಂದು ಕಂಡುಬರುತ್ತದೆ. ಆದರೆ, ಪ್ರಾಸಾ- 3 ಇವರು ನುಡಿದ ಸಾಕ್ಷ್ಯವನ್ನು ನೋಡಿದಾಗ ಬಳ್ಳಾರಿಯ ರೈಲ್ವೇ ಆರಕ್ಷಕರು ನಿಶಾನೆ ಪಿ - 8 ರಂತೆ ತಹಶೀಲ್ದಾರ್ ಅಂದರೆ ಪ್ರಾಸಾ- 3 ಇವರಿಗೆ ದಿನಾಂಕ 28/04/2024 ರಂದು ಅಮಾನತ್ತುಪಡಿಸಿಕೊಂಡ

ಗಾಂಜಾವನ್ನು ಇನ್ವೆಂಟರಿ ಮಾಡಲು ಕೋರಿಕೆ ಪತ್ರ ಸಲ್ಲಿಸಿದ್ದರೂ ಸಹ, ದಿನಾಂಕ 02/05/2024 ರಂದು ಅಮಾನತ್ತುಪಡಿಸಿಕೊಂಡ ಗಾಂಜಾವನ್ನು ಇನ್ವೆಂಟರಿ ಮಾಡಿಸಿದ್ದು, ಈ ವಿಳಂಬಕ್ಕೆ ಕಾರಣ ಏನು ಎನ್ನುವ ಬಗ್ಗೆ ಅಭಿಯೋಜನೆಯು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ.

48. ಪ್ರಾಸಾ- 6 ಇವರು ನುಡಿದ ಸಾಕ್ಷ್ಯವನ್ನು ಗಮನಿಸಿದಾಗ ಈ ಪ್ರಕರಣದಲ್ಲಿ ದಿನಾಂಕ 02/05/2024 ರಂದು ಇನ್ವೆಂಟರಿ ಕ್ರಮ ಜರುಗಿಸಿದ ಸಮಯ ತೆಗೆದಿರಿಸಿದ ಮಾದರಿ ಗಾಂಜಾವನ್ನು ರಾಸಾಯನಿಕ ಪರೀಕ್ಷೆಗಾಗಿ ದಿನಾಂಕ 08/05/2024 ರಂದು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿದೆ ಎಂದು ಕಂಡುಬರುತ್ತದೆ. ಈ ಪ್ರಕರಣದಲ್ಲಿ ಅಭಿಯೋಜನೆಯು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯನ್ನು ಪ್ರಾಸಾ- 6 ಇವರ ಮೂಲಕ ನಿಶಾನೆ ಪಿ- 18 ಎಂದು ನಿಶಾನೀಕರಿಸಿಕೊಂಡಿರುತ್ತದೆ. ನಿಶಾನೆ ಪಿ- 18 ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯನ್ನು ನೋಡಿದಾಗ ರೈಲ್ವೇ ಆರಕ್ಷಕ ಠಾಣೆಯ ಆರಕ್ಷಕರು ಆರ್ ಪಿಸಿ-540 ಮಂಜುನಾಥ ಇವರ ಮೂಲಕ ದಿನಾಂಕ 08/05/2024 ರಂದು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರಾಸಾಯನಿಕ ಪರೀಕ್ಷೆಗಾಗಿ ಮಾದರಿ ಗಾಂಜಾವನ್ನು ಕಳುಹಿಸಿದ್ದು, ವಿಧಿ ವಿಜ್ಞಾನ ಪ್ರಯೋಗಾಲಯದವರು ನಿಶಾನೆ ಪಿ- 17 ರಂತೆ ಸದರಿ ಮಾದರಿಗಳನ್ನು ಸ್ವೀಕರಿಸಿರುತ್ತಾರೆ ಎಂದು ಕಂಡುಬರುತ್ತದೆ. ಪ್ರಾಸಾ- 6 ರವರು ನುಡಿದ ಸಾಕ್ಷ್ಯವನ್ನು ಗಮನಿಸಿದಾಗ, ದಿನಾಂಕ 02/05/2024 ರಂದು ಇನ್ವೆಂಟರಿ ಮಾಡಿದ ಕಾಲಕ್ಕೆ ತೆಗೆದಿರಿಸಿದ ಮಾದರಿ ಗಾಂಜಾವನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರಾಸಾಯನಿಕ ಪರೀಕ್ಷೆಗಾಗಿ ಚಾಸಾ- 15 ಮಂಜುನಾಥ ರೆಡ್ಡಿ ಇವರ ಮುಖಾಂತರ ಕಳುಹಿಸಿಕೊಡಲಾಗಿದೆ ಎಂದು ಕಂಡುಬರುತ್ತದೆ. ಅದಲ್ಲದೇ, ಈ ಪ್ರಕರಣದಲ್ಲಿ ದಿನಾಂಕ 28/04/2024 ರಂದು ಅಮಾನತ್ತು ಪಡಿಸಿಕೊಂಡ

ಗಾಂಜಾವನ್ನು ದಿನಾಂಕ 02/05/2024 ರಂದು ಬಳ್ಳಾರಿಯ ತಹಶೀಲ್ದಾರ್ ಅಂದರೆ ಪ್ರಾಸಾ- 3 ಇವರ ಸಮಕ್ಷಮ ಇನ್ವೆಂಟರಿ ಮಾಡಿಸಲಾಗಿರುತ್ತದೆ. ಆದರೆ, ದಿನಾಂಕ 08/05/2024 ರಂದು ಮಾದರಿಗಾಗಿ ತೆಗೆದಿರಿಸಿದ ಗಾಂಜಾವನ್ನು ರಾಸಾಯನಿಕ ಪರೀಕ್ಷೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ಕೊಡಲಾಗಿದೆ ಎಂದು ನಿಶಾನೆ ಪಿ- 18 ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಮತ್ತು ಚಾಸಾ- 6 ಇವರ ಸಾಕ್ಷ್ಯದಿಂದ ಕಂಡುಬರುತ್ತದೆ. ಅದಲ್ಲದೇ, ದಿನಾಂಕ 28/04/2024 ರಂದು ವಶಪಡಿಸಿಕೊಂಡ ಗಾಂಜಾವನ್ನು, ದಿನಾಂಕ 02/05/2024 ರಂದು ಇನ್ವೆಂಟರಿ ಮಾಡಿಸಿದ್ದು, ನಂತರ ಮಾದರಿ ಗಾಂಜಾವನ್ನು ದಿನಾಂಕ 08/05/2024 ರಂದು ರಾಸಾಯನಿಕ ಪರೀಕ್ಷೆಗೆ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದು, ಈ ಕಾರ್ಯ ವಿಳಂಬಕ್ಕೆ ಯಾವುದೇ ಸೂಕ್ತ ವಿವರಣೆಯನ್ನು ಅಭಿಯೋಜನೆಯು ನ್ಯಾಯಾಲಯದ ಮುಂದೆ ಒದಗಿಸಿರುವುದಿಲ್ಲ.

49. ಈ ಪ್ರಕರಣದಲ್ಲಿ ಪಂಚರ ಸಮ್ಮುಖದಲ್ಲಿ ತಹಶೀಲ್ದಾರ್ ಇವರ ಮುಂದೆ ಇನ್ವೆಂಟರಿ/ ದಾಸ್ತಾನು ನಡೆಸಲಾಗಿದೆ ಎಂದು ಹೇಳಲಾಗಿದ್ದರೂ, ಅದನ್ನು ಬಲವಾದ ಸಾಕ್ಷ್ಯಗಳೊಂದಿಗೆ ಸಾಬೀತುಪಡಿಸಲಾಗಿಲ್ಲ. ಇದಲ್ಲದೆ, ವಶಪಡಿಸಿಕೊಂಡ ಮುದ್ದೆಮಾಲುಗಳನ್ನು ಪರೀಕ್ಷೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸುವಲ್ಲಿ 72 ಗಂಟೆಗಳಿಗಿಂತ ಹೆಚ್ಚು ವಿಳಂಬವಾಗಿದೆ. ಆದ್ದರಿಂದ, ದಾಸ್ತಾನು ಸಮಯದಲ್ಲಿ ತೆಗೆದುಕೊಂಡ ಮಾದರಿಯನ್ನು ಪರೀಕ್ಷೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ನಂಬುವುದು ತುಂಬಾ ಕಷ್ಟ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ತನಿಖಾಧಿಕಾರಿ ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 52 ನ್ನು ಪಾಲಿಸಲು ವಿಫಲರಾಗಿದ್ದಾರೆ.

50. ಈ ಪ್ರಕರಣದಲ್ಲಿ ಆರೋಪಿತನ ಸ್ವಾಧೀನದಿಂದ 6 ಕೆಜಿ 220 ಗ್ರಾಂ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಭಿಯೋಜನೆಯ ವಾದವಾಗಿದ್ದರೂ ಸಹ, ಅದನ್ನು ನಿಶಾನೆ ಪಿ- 3 ಪಂಚನಾಮೆ ಮುಖೇನ ವಶಪಡಿಸಿಕೊಳ್ಳಲಾಗಿದೆಯೇ ಎಂಬುದು ಗಮನಿಸಬೇಕಾದ ಸಂಗತಿ. ಮಾಲ್ಖಾನಾ ವಹಿಯನ್ನು ನಿರ್ವಹಿಸಲಾಗಿದೆಯೇ ಎಂಬುದನ್ನು ತೋರಿಸಲು ಯಾವುದೇ ಸಾಕ್ಷ್ಯವನ್ನು ಅಭಿಯೋಜನೆಯು ನ್ಯಾಯಾಲಯದ ಮುಂದೆ ಇರಿಸಿರುವುದಿಲ್ಲ. ವಶಪಡಿಸಿಕೊಂಡ ಗಾಂಜಾವನ್ನು ಇನ್ವೆಂಟರಿ ಮಾಡಿಸುವವರೆಗೆ ಮತ್ತು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸುವವರೆಗೆ ಯಾರ ಸುಪರ್ಧಿಯಲ್ಲಿದ್ದವು ಎಂಬುದನ್ನು ತೋರಿಸಲು ಸಹ ಯಾವುದೇ ನಂಬಲರ್ಹ ಸಾಕ್ಷ್ಯ ನ್ಯಾಯಾಲಯದ ಮುಂದಿರುವುದಿಲ್ಲ.

51. ಈ ಹಂತದಲ್ಲಿ, ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 55 ಅನ್ನು ಉಲ್ಲೇಖಿಸುವುದು ಪ್ರಸ್ತುತವಾಗಿದೆ, ಇದು ವಶಪಡಿಸಿಕೊಳ್ಳಲಾದ ಮತ್ತು ಒಪ್ಪಿಸಲಾದ ವಸ್ತುಗಳ ಉಸ್ತುವಾರಿಯನ್ನು ವಹಿಸುತ್ತದೆ, ಅದು ಈ ಕೆಳಗಿನಂತೆ ಇರುತ್ತದೆಃ-

> **55. ವಶಪಡಿಸಿಕೊಳ್ಳಲಾದ ಮತ್ತು ಒಪ್ಪಿಸಲಾದ ವಸ್ತುಗಳನ್ನು ಆರಕ್ಷಕರು ತಮ್ಮ ಸುಪರ್ದಿಗೆ ತೆಗೆದುಕೊಳ್ಳತಕ್ಕದ್ದು.-**
>
> ಪೊಲೀಸ್ ಠಾಣೆಯ ಚಾರ್ಜಿನಲ್ಲಿರುವ ಠಾಣಾ ಅಮಲ್ದಾರನು, ದಂಡಾಧಿಕಾರಿಯ ಆದೇಶ ಆಗುವವರೆಗೆ ಆಯಾ ಪೊಲೀಸ್ ಠಾಣೆಯ ಪ್ರಾದೇಶಿಕ ವ್ಯಾಪ್ತಿಯಲ್ಲಿ ಈ ಅಧಿನಿಯಮದ ಮೇರೆಗೆ ವಶಪಡಿಸಿಕೊಳ್ಳಲಾಗಿರುವ ಮತ್ತು ಆತನ ವಶಕ್ಕೆ ಕೊಡಲಾದ ಎಲ್ಲಾ ವಸ್ತುಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಸುರಕ್ಷಿತ ಅಭಿರಕ್ಷೆಯಲ್ಲಿಡತಕ್ಕದ್ದು ಮತ್ತು ಆ ವಸ್ತುಗಳೊಂದಿಗೆ ಪೊಲೀಸು ಠಾಣೆಗೆ

ಹೋಗುವ ಅಥವಾ ಆ ಉದ್ದೇಶಕ್ಕಾಗಿ ನಿಯೋಜಿತವಾಗಿರುವ ಅಧಿಕಾರಿಯು ಅಂಥ ವಸ್ತುಗಳಿಗೆ ತನ್ನ ಮೊಹರನ್ನು (ಸೀಲನ್ನು) ಹಾಕಲು ಮತ್ತು ಅವುಗಳ ಅಥವಾ ಅವುಗಳಲ್ಲಿಂದ ಸ್ಯಾಂಪಲನ್ನು ತೆಗೆದುಕೊಳ್ಳಲು ಅನುಮತಿಸತಕ್ಕದ್ದು ಮತ್ತು ಹಾಗೆ ತೆಗೆದುಕೊಳ್ಳಲಾಗಿರುವ ಸ್ಯಾಂಪಲ್ಲುಗಳಿಗೆ ಠಾಣಾ ಚಾರ್ಜಿನಲ್ಲಿರುವ ಠಾಣಾ ಅಮಲ್ದಾರನು ತನ್ನ ಮೊಹರಿನಿಂದ ಮೊಹರು ಮಾಡತಕ್ಕದ್ದು.

52. ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 55 ಸ್ಪಷ್ಟವಾಗಿ ತಿಳಿಸುವುದೇನೆಂದರೆ, ಆರಕ್ಷಕ ಠಾಣೆಯ ಉಸ್ತುವಾರಿ ಅಧಿಕಾರಿಯೊಬ್ಬರು ನ್ಯಾಯಿಕ ದಂಡಾಧಿಕಾರಿಯವರ ಆದೇಶದವರೆಗೆ ಜಪ್ತುಪಡಿಸಿಕೊಂಡ ಗಾಂಜಾದ ಉಸ್ತುವಾರಿ ವಹಿಸುತ್ತಾರೆ ಮತ್ತು ಸುರಕ್ಷಿತ ಸುಪರ್ದಿಗೆ ತೆಗೆದುಕೊಳ್ಳಬೇಕಾಗುತ್ತದೆ ಮತ್ತು ವಶಪಡಿಸಿಕೊಂಡ ವಸ್ತುಗಳನ್ನು ಆರಕ್ಷಕ ಠಾಣಾ ಮಲ್ಖಾನಾದಲ್ಲಿ ಠೇವಣಿ ಇಡುವುದು ಆರಕ್ಷಕ ಅಧಿಕಾರಿಯ ಕರ್ತವ್ಯ ಎಂದು ನಿಬಂಧನೆಯ ಸರಳ ಓದುವಿಕೆಯಿಂದ ವ್ಯಕ್ತವಾಗುತ್ತದೆ.

53. ಅಭಿಯೋಜನೆಯ ಪ್ರಕಾರ, ದಿನಾಂಕ 28/04/2024 ರಂದು ಆರೋಪಿತನ ಸ್ವಾಧೀನದಿಂದ ನಿಶಾನೆ ಪಿ- 3 ಮಹಜರು ಮುಖೇನ ಒಟ್ಟು 6 ಕೆಜಿ 220 ಗ್ರಾಂ ಗಾಂಜಾವನ್ನು ನಿಶಾನೆ ಪಿ- 3 ಮಹಜರು ಮುಖೇನ ವಶಪಡಿಸಿಕೊಳ್ಳಲಾಗಿದೆ, ಆದರೆ ಗಾಂಜಾವನ್ನು ಮಾಲುಪಟ್ಟಿಯಲ್ಲಿ ಅಳವಡಿಸುವವರೆಗೆ, ಇನ್ವೆಂಟರಿ ಮಾಡಿಸುವವರೆಗೆ ಮತ್ತು ರಾಸಾಯನಿಕ ಪರೀಕ್ಷೆಗೆ ಮಾದರಿಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸುವವರೆಗೆ, ಯಾರು ವಶಪಡಿಸಿಕೊಂಡ ಗಾಂಜಾವನ್ನು ತಮ್ಮ ಸುಪರ್ದಿನಲ್ಲಿ ಇಟ್ಟುಕೊಂಡಿದ್ದರು ಎಂದು ತೋರಿಸಲು ಯಾವುದೇ ಪುರಾವೆಗಳಿಲ್ಲ. ಆರಕ್ಷಕ ಠಾಣೆಯ ಪ್ರಭಾರಿ ಅಧಿಕಾರಿಯಾಗಿದ್ದವರು ವಶಪಡಿಸಿಕೊಂಡ ಗಾಂಜಾವನ್ನು ವಹಿಸಿಕೊಂಡು ಸುರಕ್ಷಿತ ಸುಪರ್ದಿಯಲ್ಲಿಟ್ಟಿದ್ದಾರೆ ಇದಲ್ಲದೇ ವಶಪಡಿಸಿಕೊಂಡ ವಸ್ತುಗಳನ್ನು ಯಾರು ವಶಕ್ಕೆ ತೆಗೆದುಕೊಂಡಿದ್ದಾರೆ ಎಂಬುದರ ಕುರಿತು

ತನಿಖಾಧಿಕಾರಿಯು ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಅದಲ್ಲದೇ, ವಶಪಡಿಸಿಕೊಂಡ ವಸ್ತುಗಳನ್ನು ಆರಕ್ಷಕ ಠಾಣೆ ಮಲ್ಖಾನಾದಲ್ಲಿ ಜಮಾ ಮಾಡುವುದು ಆರಕ್ಷಕ ಅಧಿಕಾರಿಯ ಕರ್ತವ್ಯವಾಗಿದೆ. ಆದರೆ, ಈ ಪ್ರಕರಣದಲ್ಲಿ, ಜಪ್ತುಪಡಿಸಿಕೊಳ್ಳಲಾದ ಮುದ್ದೆ ಮಾಲುಗಳನ್ನು ಯಾರ ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂಬುದನ್ನು ತೋರಿಸಲು ಯಾವುದೇ ಸಾಕ್ಷ್ಯನ್ಯಾಯಾಲಯದ ಮುಂದೆ ಇರುವುದಿಲ್ಲ.

54. ಈ ಮೇಲೆ ಚರ್ಚಿಸಿದಂತೆ, ಆರೋಪಿತನ ವಶದಿಂದ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಲಾದ ಗಾಂಜಾವು ನಿಶಾನೆ ಪಿ- 3 ಪಂಚನಾಮೆಯಲ್ಲಿ ನಮೂದಿಸಿರುವಂತೆ ಹಸಿಯಾಗಿರುವ ಎಲೆ ಬೀಜಗಳನ್ನು ಒಳಗೊಂಡಿತ್ತು ಎಂದುಆಗಿರುತ್ತದೆ.

55. ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮದ ಕಲಂ 2 (iii) (b) ಮತ್ತು 2(iv) ರಡಿಯಲ್ಲಿ "ಗಾಂಜಾ ಅಂದರೆ, ಗಾಂಜಾ ಸಸ್ಯದ ಹೂಬಿಡುವ ಅಥವಾ ಹಣ್ಣಾಗುವ ಮೇಲ್ಭಾಗಗಳು (ಮೇಲ್ಭಾಗಗಳೊಂದಿಗೆ ಇಲ್ಲದಿರುವಾಗ ಬೀಜಗಳು ಮತ್ತು ಎಲೆಗಳನ್ನು ಹೊರತುಪಡಿಸಿ), ಅವು ತಿಳಿದಿರುವ ಅಥವಾ ಗೊತ್ತುಪಡಿಸಿದ ಯಾವುದೇ ಹೆಸರಿನಿಂದ" ವ್ಯಾಖ್ಯಾನಿಸುತ್ತದೆ. ಗಾಂಜಾವು ಗಾಂಜಾ ಸಸ್ಯದ ಹೂಬಿಡುವ ಅಥವಾ ಹಣ್ಣಾಗುವ ಮೇಲ್ಭಾಗಗಳಿಂದ ಪಡೆದ ಉತ್ಪನ್ನವಾಗಿದೆ ಎಂದು ವ್ಯಾಖ್ಯಾನವು ತೋರಿಸುತ್ತದೆ, ಎಲೆಗಳು ಮತ್ತು ಬೀಜಗಳನ್ನು ಹೊರತುಪಡಿಸಿ ಆಗಿರುತ್ತದೆ.

56. ಆರೋಪಿತನ ವಶದಿಂದ 6 ಕೆಜಿ 220 ಗ್ರಾಂಗಳಷ್ಟು ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ ಎಂಬುದು ಅಭಿಯೋಜನೆಯ ನಿರ್ದಿಷ್ಟ ಪ್ರಕರಣವಾಗಿದೆ. ನಿಶಾನೆ ಪಿ- 3 ಜಪ್ತು ಪಂಚನಾಮೆಯಲ್ಲಿ ಅಮಾನತ್ತುಪಡಿಸಿಕೊಂಡ ಗಾಂಜಾವು ಹಸಿಯಾದ ಎಲೆ

ಮತ್ತು ಬೀಜದ ರೂಪದಲ್ಲಿತ್ತು ಎಂದು ಸ್ಪಷ್ಟವಾಗಿ ಹೇಳಲಾಗಿದೆ ಮತ್ತು ಗಾಂಜಾದ ತೂಕ 6 ಕೆಜಿ 220 ಗ್ರಾಂ, ಅದರ ಅಂದಾಜು ಬೆಲೆ ₹6,22,000/- ಎಂದು ನಮೂದಿಸಿರುವುದನ್ನು ಬಹಿರಂಗಪಡಿಸುತ್ತದೆ. ಇದಲ್ಲದೆ, ತೂಕದ ಸಮಯದಲ್ಲಿ ಗಾಂಜಾವನ್ನು ಬೇರ್ಪಡಿಸಲಾಗಿದೆ ಎಂದು ತೋರಿಸಲು ಯಾವುದೇ ಪುರಾವೆಗಳಿಲ್ಲ. ಹಾಗೆ ಮಾಡದಿದ್ದರೆ, ಅದು ಸಣ್ಣ ಪ್ರಮಾಣವೇ ಅಥವಾ ವಾಣಿಜ್ಯ ಪ್ರಮಾಣವೇ ಅಥವಾ ವಾಣಿಜ್ಯ ಪ್ರಮಾಣಕ್ಕಿಂತ ಕಡಿಮೆಯೇ ಅಥವಾ ಸಣ್ಣ ಪ್ರಮಾಣಕ್ಕಿಂತ ಹೆಚ್ಚೇ ಎಂದು ನಿರ್ಧರಿಸಲು ಸಾಧ್ಯವಾಗುವುದಿಲ್ಲ. ಕಾಯಿದೆಯಡಿಯಲ್ಲಿ ವ್ಯಾಖ್ಯಾನಿಸಲಾದ ಹೂಬಿಡುವ ಅಥವಾ ಹಣ್ಣು ಬಿಡುವ ಭಾಗಗಳನ್ನು ತೆಗೆದುಹಾಕಿದ್ದರೆ, ವಶಪಡಿಸಿಕೊಂಡ ಗಾಂಜಾದ ಒಟ್ಟು ತೂಕಕ್ಕಿಂತ ಪ್ರಮಾಣವು ತುಂಬಾ ಕಡಿಮೆ ಇರುತ್ತಿತ್ತು. ಅದಲ್ಲದೇ, ನಿಶಾನೆ ಪಿ- 18 ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಲ್ಲಿಯೂ ಸಹ ಪರೀಕ್ಷೆಗೆ ಕಳುಹಿಸಲಾದ ಗಾಂಜಾ ಮಾದರಿಯಲ್ಲಿ ಎಲೆಗಳು, ಹೂವಿನ ಮೇಲ್ಭಾಗಗಳು, ಬೀಜಗಳು ಮತ್ತು ಗಾಂಜಾ ಕಡ್ಡಿಗಳನ್ನು ಒಳಗೊಂಡಿತ್ತು ಎಂದು ನಮೂದಿಸಿರುವುದು ಕಂಡುಬರುತ್ತದೆ.

57. ಆದ್ದರಿಂದ, ದಾಳಿ ನಡೆಸಿದ ಪಕ್ಷವಾಗಲಿ ಅಥವಾ ತನಿಖಾ ಅಧಿಕಾರಿಯಾಗಲಿ ವಶಪಡಿಸಿಕೊಂಡ ಗಾಂಜಾದಿಂದ ಹೂಬಿಡುವ ಅಥವಾ ಹಣ್ಣಾಗುವ ಭಾಗವನ್ನು ತೂಕ ಮಾಡುವ ಮೊದಲು ಬೇರ್ಪಡಿಸಿಲ್ಲ. ವಶಪಡಿಸಿಕೊಂಡ ಮಹಜರಿನ ಸಮಯದಲ್ಲಿ ಅವರು ಏನು ಮಾಡಿದ್ದಾರೆಂದರೆ, ಅವರು ಸಂಪೂರ್ಣ ಹಸಿಯಾದ ಗಾಂಜಾವನ್ನು ನೇರವಾಗಿ ತೂಕ ಮಾಡಿ 6 ಕೆಜಿ 220 ಗ್ರಾಂಗಳಷ್ಟು ತೂಕವನ್ನು ದಾಖಲಿಸಿದ್ದಾರೆ. ಆದ್ದರಿಂದ, ವಶಪಡಿಸಿಕೊಂಡ ಗಾಂಜಾ ಸಣ್ಣ ಪ್ರಮಾಣದ್ದೇ ಅಥವಾ ವಾಣಿಜ್ಯ ಪ್ರಮಾಣದ್ದೇ ಅಥವಾ ವಾಣಿಜ್ಯ ಪ್ರಮಾಣಕ್ಕಿಂತ ಕಡಿಮೆಯೇ ಅಥವಾ ಸಣ್ಣ ಪ್ರಮಾಣಕ್ಕಿಂತ ಹೆಚ್ಚೇ ಎಂಬುದನ್ನು ನಿರ್ಧರಿಸಲು ಸಾಧ್ಯವಿಲ್ಲ.

ಪರಿಣಾಮವಾಗಿ, ನ್ಯಾಯಾಲಯದ ನ್ಯಾಯವ್ಯಾಪ್ತಿಯ ಮೇಲೂ ಪರಿಣಾಮ ಬೀರುತ್ತದೆ. ಅಪರಾಧವು ಸಣ್ಣ ಪ್ರಮಾಣಕ್ಕೆ ಸಂಬಂಧಿಸಿದ್ದರೆ ಅದು ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 20(b)(ii) (A) ಅಡಿಯಲ್ಲಿ ಒದಗಿಸಲಾದ 1 ವರ್ಷದ ಅವಧಿಗೆ ಕಠಿಣ ಜೈಲು ಶಿಕ್ಷೆಗೆ ಗುರಿಯಾಗುತ್ತದೆ. ಪ್ರಮಾಣವು ಸಣ್ಣ ಪ್ರಮಾಣಕ್ಕಿಂತ ಹೆಚ್ಚಿದ್ದರೂ ವಾಣಿಜ್ಯ ಪ್ರಮಾಣಕ್ಕಿಂತ ಕಡಿಮೆಯಿದ್ದರೆ, ಕಾಯಿದೆಯ ಕಲಂ 20(b)(ii) (B) ಅಡಿಯಲ್ಲಿ 10 ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಗೆ ಜೈಲು ಶಿಕ್ಷೆಗೆ ಗುರಿಯಾಗುತ್ತದೆ.

58. ಮಾದಕ ಔಷಧಿಗಳ ಮತ್ತು ಮನೋಪರಿಣಾಮದ ವಸ್ತುಗಳ ಅಧಿನಿಯಮ, 1985 ರ ಕಲಂ 54 ಇದು ಅಕ್ರಮ ವಸ್ತುಗಳ ಸ್ವಾಧೀನತೆಯಿಂದಾಗಿ ಪೂರ್ವಭಾವನೆಯ ಬಗ್ಗೆ ಹೇಳುತ್ತದೆ. ಅದು ಈ ಕೆಳಕಾಣಿಸಿದಂತಿರುತ್ತದೆಃ-

> 54. ಅಕ್ರಮ ವಸ್ತುಗಳ ಸ್ವಾಧೀತನೆಯಿಂದಾಗಿ ಪೂರ್ವಭಾವನೆ- ಈ ಅಧಿನಿಯಮದ ಮೇರಗೆ ಅಧಿಚಾರಣೆಯಲ್ಲಿ-
>
> (ಎ) ಯಾವುದೇ ಮಾದಕ ಔಷಧ ಅಥವಾ ಮನೋಪರಿಣಾಮಕ ವಸ್ತು ಅಥವಾ ನಿಯಂತ್ರಿತ ವಸ್ತು;
>
> (ಬಿ) ಯಾವುದೇ ಅಫೀಮು ಸಸ್ಯ, ಗಾಂಜಾ ಸಸ್ಯ ಅಥವಾ ಅವನು ಸಾಗುವಳಿ ಮಾಡಿದ ಯಾವುದೇ ಭೂಮಿಯಲ್ಲಿ ಬೆಳೆಯುತ್ತಿರುವ ಕೋಕಾ ಸಸ್ಯ;
>
> (ಸಿ) ಯಾವುದೇ ಮಾದಕ ಔಷಧಿಯನ್ನು ಅಥವಾ ಮನೋಪರಿಣಾಮಕ ವಸ್ತುವನ್ನು ಅಥವಾ ನಿಯಂತ್ರಿತ ವಸ್ತುವನ್ನು ತಯಾರಿಸುವುದಕ್ಕಾಗಿ ವಿಶೇಷವಾಗಿ ರೂಪಿಸಲಾದ ಯಾವುದೇ

ಉಪಕರಣ ಅಥವಾ ವಿಶೇಷವಾಗಿ ಬಳಸಲಾಗುತ್ತಿರುವ ನಿತ್ಯ ಬಳಸುವ ವಸ್ತುಗಳ ಯಾವುದೇ ಗುಂಪು; ಅಥವಾ

(ಡಿ) ಮಾದಕ ಔಷಧದ ಅಥವಾ ಮನೋಪರಿಣಾಮಕ ವಸ್ತುವಿನ ಅಥವಾ ನಿಯಂತ್ರಿತ ವಸ್ತುವಿನ ತಯಾರಿಕೆಯ ಸಂಬಂಧದಲ್ಲಿ ಯಾವುದೇ ಕಾರ್ಯ ವಿಧಾನಕ್ಕೆ ಒಳಪಟ್ಟ ಯಾವುದೇ ವಸ್ತುಗಳು ಅಥವಾ ಯಾವುದೇ ವಸ್ತುಗಳಿಂದ ಯಾವುದೇ ಮಾದಕ ಔಷಧವನ್ನು ಅಥವಾ ಮನೋಪರಿಣಾಮಕ ವಸ್ತುವನ್ನು ಅಥವಾ ನಿಯಂತ್ರಿತ ವಸ್ತುವನ್ನು ತಯಾರಿಸಲಾಗಿದೆಯೋ ಆ ವಸ್ತುಗಳ ಯಾವುದೇ ಬಳಕೆಗಳು,

ಇವುಗಳ ಸ್ವಾಧೀನತೆಗೆ ಸಂಬಂಧಿಸಿದಂತೆ ಸಮಾಧಾನಕರ ವಿವರಣೆಯನ್ನು ಕೊಡುವಲ್ಲಿ ವಿಫಲನಾದ ಯಾವನೇ ಆರೋಪಿಯು ಈ ಅಧಿನಿಯಮದ ಮೇರೆಗೆ ಅಪರಾಧ ಮಾಡಿರುತ್ತಾನೆಂದು, ವಿರುದ್ಧವಾದುದು ರುಜುವಾತಾದ ಹೊರತು ಮತ್ತು ತನಕ, ಪೂರ್ವಭಾವನೆ ಮಾಡತಕ್ಕದ್ದು.

59. ಈ ಮೇಲಿನ ಕಲಂ 54 ರ ಅಡಿಯಲ್ಲಿ ದೋಷಾರೋಪಣೆಯ ಆರೋಪಿಗಳ ವಿರುದ್ಧದ ಊಹೆಯು, ಸ್ವಾಧೀನವನ್ನು ತೃಪ್ತಿಕರವಾಗಿ ವಿವರಿಸಲು ನಿರಾಕರಿಸುವುದು. ಇದು ಎಲ್ಲಾ ಸಮಂಜಸವಾದ ಅನುಮಾನಗಳನ್ನು ಮೀರಿ ಆರೋಪವನ್ನು ಸಾಬೀತುಪಡಿಸುವ ಅಭಿಯೋಜನೆಯ ಬಾಧ್ಯತೆಯನ್ನು ನಿರಾಕರಿಸುವುದಿಲ್ಲ. ಪುರಾವೆಯ ಹಿಮ್ಮುಖ ಹೊರೆಯೊಂದಿಗೆ ಪೂರ್ವಭಾವಿ ಊಹೆಯು ಸಂಭವನೀಯತೆಯ ಪ್ರಾಮುಖ್ಯತೆಯ ಆಧಾರದ ಮೇಲೆ ಅಪರಾಧ ನಿರ್ಣಯವನ್ನು ಅನುಮೋದಿಸುವುದಿಲ್ಲ. ಕಲಂ 54 ರಡಿಯಲ್ಲಿ ಸ್ವಾಧೀನತೆಗೆ ಸಂಬಂಧಿಸಿದಂತೆ ಸಮಾಧಾನಕರ ವಿವರಣೆಯನ್ನು ಕೊಡುವಲ್ಲಿ ಆರೋಪಿತನು ವಿಫಲನಾದಾಗ ಮಾತ್ರ ಮತ್ತು ಅಭಿಯೋಜನೆಯು ಸಂಭವನೀಯತೆಯ

ಪ್ರಾಮುಖ್ಯತೆಯಲ್ಲದೆ, ಸಮಂಜಸವಾದ ಸಂದೇಹವನ್ನು ಮೀರಿ ಆರೋಪಿತನು ಅಪರಾಧವನ್ನು ಮಾಡಿರುತ್ತಾನೆಂದು ಸ್ಥಾಪಿಸಿದರೆ ಅಥವಾ ಸಾಬೀತುಪಡಿಸಿದರೆ, ಆಗ ಆರೋಪಿತನು ಅಪರಾಧ ಮಾಡಿರುತ್ತಾನೆಂದು ಪೂರ್ವಭಾವನೆ ಮಾಡತಕ್ಕದ್ದು.

60. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯ **(2008) 16 SCC 417** ರಲ್ಲಿ ವರದಿಯಾದ, **ನೂರ್ ಅಗಾ ವಿರುದ್ಧ ಪಂಜಾಬ್ ರಾಜ್ಯ,** ಈ ಪ್ರಕರಣದಲ್ಲಿ - 'ಅಭಿಯೋಜನೆಯ ಮೇಲೆ ಆರಂಭಿಕ ಹೊರೆ ಇರುತ್ತದೆ ಮತ್ತು ಅದು ತೃಪ್ತರಾದಾಗ ಮಾತ್ರ, ಕಾನೂನು ಹೊರೆ ಬದಲಾಗುತ್ತದೆ. ಅಭಿಯೋಜನೆಯು ಮೂಲಭೂತ ಸಂಗತಿಗಳನ್ನು ಸಾಬೀತುಪಡಿಸಲು ವಿಫಲವಾದರೆ, ಆರೋಪಿಗಳಿಂದ ನಿಷಿದ್ಧ ವಸ್ತುಗಳನ್ನು ಹೊಂದಿರುವ ಅಪರಾಧಿ ಕೃತ್ಯವನ್ನು ಸಾಬೀತುಪಡಿಸಲಾಗಿದೆ ಎಂದು ಹೇಳಲಾಗುವುದಿಲ್ಲ' ಎಂದು ಅಭಿಪ್ರಾಯಪಟ್ಟಿರುತ್ತದೆ.

61. ಮಾದಕ ಔಷಧಿಗಳ ಮತ್ತು ಮನೋಪರಿಣಾಮದ ವಸ್ತುಗಳ ಅಧಿನಿಯಮ, 1985 ರ ಕಲಂ 54 ರ ಅಡಿಯಲ್ಲಿ ಊಹೆ ಇದೆ ಎಂದು ಅಭಿಯೋಜನೆಯು ವಾದಿಸಿದರೂ, ನನ್ನ ಅಭಿಪ್ರಾಯದಲ್ಲಿ ಆರೋಪಿತನು ದಿನಾಂಕ 28/04/2024 ರಂದು ರೈಲುಗಾಡಿ ಸಂಖ್ಯೆ 16592 ಹಂಪಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಸಾರ್ವಜನಿಕರಿಗೆ ಗಾಂಜಾ ಮಾರಾಟ ಮಾಡಲು ಸಾಗಾಣಿಕೆ ಮಾಡುತ್ತಿದ್ದನು, ಆರಕ್ಷಕರು ಆರೋಪಿತನನ್ನು ರೈಲ್ವೇ ಆರಕ್ಷಕ ಠಾಣೆಗೆ ಕರೆದುಕೊಂಡು ಬಂದು, ಚಾಸಾ- 4 ಇವರ ಸಮಕ್ಷಮ ಹಾಜರುಪಡಿಸಿ, ಆತನ ಸ್ವಾಧೀನದಲ್ಲಿದ್ದ ಬ್ಯಾಗ್ ನಲ್ಲಿದ್ದ 6 ಬಂಡಲ್ ಗಳ ಪ್ಯಾಕ್ ಗಳಿಂದ 6 ಕೆಜಿ 220 ಗ್ರಾಂ ಗಾಂಜಾವನ್ನು ನಿಶಾನೆ ಪಿ- 3 ಪಂಚನಾಮೆಯ ಮೂಲಕ ಅಮಾನತ್ತುಪಡಿಸಿಕೊಳ್ಳಲಾಗಿದೆ, ಅಕ್ರಮವಾಗಿ ಮತ್ತು ಪ್ರಜ್ಞಾಪೂರ್ವಕವಾಗಿ ನಿಷಿದ್ಧ ವಸ್ತುಗಳನ್ನು ಆರೋಪಿತನು ಹೊಂದಿದ್ದನು ಮತ್ತು ಅವುಗಳನ್ನು

ಸಾರ್ವಜನಿಕರಿಗೆ ಅನಧಿಕೃತವಾಗಿ ಮಾರಾಟ ಮಾಡಲು ಹಂಪಿ ಎಕ್ಸಪ್ರೆಸ್ ರೈಲುಗಾಡಿಯ ಸಾಮಾನ್ಯ ಬೋಗಿಯಲ್ಲಿ ಸಾಗಾಣಿಕೆ ಮಾಡುತ್ತಿದ್ದನು ಎಂದು ಅಭಿಯೋಜನೆಯು ಸ್ಪಷ್ಟವಾಗಿ ಸಾಬೀತುಪಡಿಸಿದಾಗ/ ಸ್ಥಾಪಿಸಿದಾಗ ಮತ್ತು ಕಾನೂನಿನ ಪ್ರಕಾರ ಶೋಧ ನಡೆಸಲಾಗಿದೆ ಎಂದು ಕಂಡುಬಂದಾಗ ಮಾತ್ರ ಊಹೆಯನ್ನು ಹೆಚ್ಚಿಸಬಹುದು. ಆದರೆ ಪ್ರಕರಣದಲ್ಲಿ ಅಭಿಯೋಜನೆಯು ಅಂತಹ ಊಹೆಯ ಲಾಭವನ್ನು ಪಡೆಯಲು ಸಾಧ್ಯವಿಲ್ಲ.

62. ಮಾದಕ ಔಷಧಿಗಳ ಮತ್ತು ಮನೋಪರಿಣಾಮದ ವಸ್ತುಗಳ ಅಧಿನಿಯಮ, 1985 ರ ಕಲಂ 57 ಇದು ಬಂಧನದ ಮತ್ತು ವಶಾವಣೆಯ ವರದಿಯ ಬಗ್ಗೆ ಹೇಳುತ್ತದೆ. ಅದು ಈ ಕೆಳಕಾಣಿಸಿದಂತಿರುತ್ತದೆಃ-

> 57. ಈ ಅಧಿನಿಯಮದ ಮೇರೆಗೆ ಯಾವುದೇ ವ್ಯಕ್ತಿಯು ಯಾವುದೇ ಬಂಧನವನ್ನು ಅಥವಾ ವಶಾವಣೆಯನ್ನು ಮಾಡಿದಾಗ ಆತನು, ಅಂಥ ಬಂಧನದ ಅಥವಾ ವಶಾವಣೆಯ ಆನಂತರದ ನಲವತ್ತೆಂಟು ಘಂಟೆಯೊಳಗಾಗಿ ಅಂಥ ಬಂಧನದ ಅಥವಾ ವಶಾವಣೆಯ ಎಲ್ಲಾ ವಿವರಗಳ ಸಂಪೂರ್ಣ ವರದಿಯನ್ನು ತನ್ನ ನಿಕಟ ಪದೀಯ ಹಿರಿಯನಿಗೆ ಮಾಡತಕ್ಕದ್ದು.

63. ಈ ಪ್ರಕರಣದಲ್ಲಿ ಪ್ರಾಸಾ- 1 ರವರಾಗಲೀ ಅಥವಾ ತನಿಖಾಧಿಕಾರಿಯಾಗಲೀ ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 57 ರ ನಿಬಂಧನೆಗಳ ಅನುಸರಣೆಯ ಬಗ್ಗೆ ತಮ್ಮ ಸಾಕ್ಷ್ಯದಲ್ಲಿ ಏನನ್ನೂ ಹೇಳಿರುವುದಿಲ್ಲ. ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 57 ರ ಪ್ರಕಾರ, ಈ ಕಾಯಿದೆಯ ಅಡಿಯಲ್ಲಿ ಯಾವುದೇ ಬಂಧನ ಅಥವಾ ವಶಪಡಿಸಿಕೊಂಡ ಸಂದರ್ಭದಲ್ಲಿ, ತನಿಖಾಧಿಕಾರಿಯು ಮುಂದಿನ 48 ರೊಳಗೆ ಎಲ್ಲಾ ವಿವರಗಳ ಸಂಪೂರ್ಣ

ವರದಿಯನ್ನು ಅಂತಹ ಬಂಧನ ಅಥವಾ ವಶಪಡಿಸಿಕೊಂಡ ನಂತರ ತನ್ನ ತಕ್ಷಣದ ಅಧಿಕೃತ ಉನ್ನತ ಅಧಿಕಾರಿಗೆ ಸಲ್ಲಿಸಬೇಕು. ಈ ಸಂದರ್ಭದಲ್ಲಿ, ಅಂತಹ ವರದಿಯನ್ನು ನೀಡಲಾಗಿಲ್ಲ. ಅದರ ಬಗ್ಗೆ ಯಾವುದೇ ವಿವರಣೆಯನ್ನು ದಾಖಲೆಯ ರೂಪದಲ್ಲಿ ನ್ಯಾಯಾಲಯದ ಮುಂದೆ ಇರಿಸಲಾಗಿಲ್ಲ. ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 57 ರ ಒಂದು ಭಾಗದ ಅನುಸರಣೆಯನ್ನು ತನಿಖಾಧಿಕಾರಿಗಳು ಮಾಡಿದ್ದಾರೆ ಎನ್ನುವ ಬಗ್ಗೆ ಯಾವುದೇ ಪುರಾವೆಗಳಿಲ್ಲ. ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 57 ರ ನಿಬಂಧನೆಗಳನ್ನು ಅನುಸರಿಸಲು ವಿಫಲವಾದರೆ, ನಿಷಿದ್ಧ ಪದಾರ್ಥಗಳನ್ನು ವಶಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಪುರಾವೆಗಳ ಪರಿಗಣನೆಯ ಮೇಲೆ ಪರಿಣಾಮ ಬೀರುತ್ತದೆ. ನನ್ನ ದೃಷ್ಟಿಯಲ್ಲಿ, ಅಭಿಯೋಜನೆಯ ಪ್ರಕರಣದಲ್ಲಿ ಇದು ಮತ್ತೊಂದು ದೋಷವಾಗಿದೆ ಮತ್ತು ಇದು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿರುತ್ತದೆ. ಈ ಪ್ರಕರಣದಲ್ಲಿ ಸಾಕ್ಷಿದಾರರು ನುಡಿದ ಸಾಕ್ಷವನ್ನು ಗಮನಿಸಿದಾಗ ಆರೋಪಿತನನ್ನು ದಸ್ತಗಿರಿ ಮಾಡಿ, ಆತನ ಸ್ವಾಧೀನದಿಂದ ಗಾಂಜಾವನ್ನು ಜಪ್ತುಪಡಿಸಿಕೊಳ್ಳಲಾಗಿದ್ದು, ಆದರೆ, ಗಾಂಜಾವನ್ನು ವಶಪಡಿಸಿಕೊಂಡ ಬಗ್ಗೆಯಾಗಲೀ ಮತ್ತು ಆರೋಪಿತನನ್ನು ಬಂಧಿಸಿದ ಬಗ್ಗೆ ತನಿಖಾಧಿಕಾರಿಯು ಮುಂದಿನ 48 ಗಂಟೆಯೊಳಗೆ ಎಲ್ಲಾ ವಿವರಗಳ ಸಂಪೂರ್ಣ ವರದಿಯನ್ನು ಅಂತಹ ವಶಪಡಿಸಿಕೊಂಡ ನಂತರ ತನ್ನ ತಕ್ಷಣದ ಅಧಿಕೃತ ಉನ್ನತ ಅಧಿಕಾರಿಗೆ ಸಲ್ಲಿಸಬೇಕಿತ್ತು. ಆದರೆ ಈ ಪ್ರಕರಣದಲ್ಲಿ ಅಂತಹ ವರದಿಯನ್ನು ನೀಡಲಾಗಿಲ್ಲ.

64. ಅದಲ್ಲದೇ, ಆರಕ್ಷಕರು 6 ಕೆಜಿ 220 ಗ್ರಾಂ ತೂಕದ ಗಾಂಜಾವನ್ನು ಈ ಮೇಲೆ ಹೇಳಿದಂತೆ ಆರೋಪಿತನ ಸ್ವಾಧೀನದಿಂದ ಜಪ್ತುಪಡಿಸಿಕೊಂಡು ನಿಶಾನೆ ಪಿ- 3 ರಂತೆ

ಮಹಜರು ಬರೆದಿರುತ್ತಾರೆ ಮತ್ತು ನಿಶಾನೆ ಪಿ- 4 ರಂತೆ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಮತ್ತು ದಿನಾಂಕ 02/05/2024 ರಂದು ಜಪ್ತುಪಡಿಸಿಕೊಂಡ ಗಾಂಜಾದ ಇನ್ವೆಂಟರಿ ಸಮಯ ನಿಶಾನೆ ಪಿ- 11 ರಂತೆ ಛಾಯಾಚಿತ್ರಗಳನ್ನು ತೆಗೆಯಲಾಗಿದೆ ಎಂದು ಅಭಿಯೋಜನೆಯ ಪ್ರಕರಣ ಆಗಿರುತ್ತದೆ. ಎಲೆಕ್ಟ್ರಾನಿಕ್ ದಾಖಲೆಗಳೆಂದು ಪರಿಗಣಿಸಲಾಗುವ ಅಭಿವೃದ್ಧಿಪಡಿಸಿದ ಛಾಯಾಚಿತ್ರಗಳಿಗೆ, ನ್ಯಾಯಾಲಯದಲ್ಲಿ ಸ್ವೀಕಾರಾರ್ಹತೆಯನ್ನು ಖಚಿತಪಡಿಸಿಕೊಳ್ಳಲು ಸಾಮಾನ್ಯವಾಗಿ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65-B ಅಡಿಯಲ್ಲಿ ಪ್ರಮಾಣಪತ್ರದ ಅಗತ್ಯವಿರುತ್ತದೆ, ಅಂತಹ ಪ್ರಮಾಣ ಪತ್ರಗಳನ್ನು ಅಭಿಯೋಜನೆಯು ನಿಶಾನೆ ಪಿ- 14 ಮತ್ತು 16 ರ ಪ್ರಕಾರ ಈ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ.

65. ಅದಲ್ಲದೇ, ಈ ಪ್ರಕರಣದಲ್ಲಿ ನಿಶಾನೆ ಪಿ- 3 ಪಂಚನಾಮೆಯ ಸ್ವತಂತ್ರ ಸಾಕ್ಷಿದಾರರೆಂದು ಹೇಳಲಾದ ಪ್ರಾಸಾ- 2 ಇವರು ತಮ್ಮ ಸಾಕ್ಷ್ಯದಲ್ಲಿ ತನ್ನ ಸಮಕ್ಷಮ ಆರಕ್ಷಕರು ನಿಶಾನೆ ಪಿ- 3 ರಂತೆ ಮಹಜರು ಬರೆದ ಪಂಚನಾಮೆಗೆ ಸಹಿ ಮಾಡಿರುವುದಾಗಿ ಮತ್ತು ಬ್ಯಾಗ್‌ನಲ್ಲಿ ಎರಡು ಮೊಬೈಲ್ ಗಳು ಇದ್ದವು ಎಂದು ಸಾಕ್ಷ್ಯ ನುಡಿದಿದ್ದರೆ, ಆರೋಪಿತನ ಪರ ವಕೀಲರು ಈ ಸಾಕ್ಷಿಯನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ತನ್ನ ಪಾಟೀ ಸವಾಲಿನಲ್ಲಿ ತನಗೆ ಕನ್ನಡ ಓದಲು ಬರೆಯಲು ಗೊತ್ತಿಲ್ಲ, ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ತನಗೆ ಗೊತ್ತಿಲ್ಲ, ಆರಕ್ಷಕ ಕೋರಿಕೆಯ ಮೇರೆಗೆ ತಾನು ಸಹಿ ಮಾಡಿರುವುದಾಗಿ, ಮೊಬೈಲ್‌ಗಳು ಯಾವ ಕಂಪನಿಯದ್ದು ಎಂದು ತನಗೆ ಹೇಳಲು ಆಗುವುದಿಲ್ಲ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಆ ಕಾರಣದಿಂದ, ಪ್ರಾಸಾ- 2 ಇವರು ನಿಶಾನೆ ಪಿ- 3 ಪಂಚನಾಮೆಯ ಸಾಕ್ಷಿದರರಾಗಿದ್ದರೂ ಸಹ, ಇವರು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿದ್ದರೂ, ಇವರನ್ನು ಆರೋಪಿತನ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ ವ್ಯತಿರಕ್ತವಾಗಿ ಸಾಕ್ಷ್ಯ

ನುಡಿದಿರುವುದರಿಂದ, ಅಭಿಯೋಜನೆಯು ನಿಶಾನೆ ಪಿ- 3 ಮಹಜರನ್ನು ನಿಸ್ಸಂಶಯವಾಗಿ ರುಜುವಾತುಪಡಿಸಿಕೊಳ್ಳಲು ವಿಫಲವಾಗಿರುತ್ತದೆ.

66. ಪ್ರಾಸಾ- 4 ಇವರು ತಮ್ಮ ಪಾಟೀ ಸವಾಲಿನ ಸಾಕ್ಷ್ಯದಲ್ಲಿ ನಿಶಾನೆ ಪಿ - 1 ಫಿರ್ಯಾದಿನಲ್ಲಿ ಪ್ರಾಸಾ- 1 ಇವರು ತನ್ನ ಸಮಕ್ಷಮ ಆರೋಪಿ ಮತ್ತು ಮುದ್ದೆ ಮಾಲುಗಳನ್ನು ಹಾಜರುಪಡಿಸಿದ ಬಗ್ಗೆ ನಮೂದು ಇಲ್ಲ, ಪಂಚನಾಮೆ ಅಥವಾ ದೂರಿನ ಮೂಲಕ ತನಗೆ ವಿಷಯ ಗೊತ್ತಾದಾಗ ತಾನು ಮೇಲಾಧಿಕಾರಿಯವರಿಗೆ ಬರವಣಿಗೆ ಮೂಲಕ ತಿಳಿಸಿಲ್ಲ ಮತ್ತು ಪತ್ರಾಂಕಿತ ಅಧಿಕಾರಿಯ ಸಮಕ್ಷಮದಲ್ಲಿ ಪಂಚನಾಮೆ ಬರೆದಿಲ್ಲ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ.

67. ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮವು ಒಂದು ವಿಶೇಷ ಶಾಸನವಾಗಿದೆ, ಇದು ಸ್ವಯಂ-ಒಳಗೊಂಡಿರುವ ಘಟಕವಾಗಿದೆ, ಮುಖ್ಯವಾಗಿ ತನಿಖೆ, ನಿಷಿದ್ಧ ವಸ್ತುಗಳ ಸಂರಕ್ಷಣೆ, ಅದರ ಪ್ರಮಾಣೀಕರಣ, ಮಾದರಿ ಮತ್ತು ನ್ಯಾಯಾಲಯದ ಮುಂದೆ ಅದರ ಹಾಜರುಪಡಿಸುವುದಕ್ಕೆ ಸಂಬಂಧಿಸಿದೆ. ನಿಬಂಧನೆಗಳು ಸ್ವರೂಪದಲ್ಲಿ ಕಡ್ಡಾಯವಾಗಿರುತ್ತವೆ ಮತ್ತು ಆದ್ದರಿಂದ, ಕಡ್ಡಾಯ ನಿಬಂಧನೆಗಳ ಅನುಸರಣೆಯು ಅಪರಾಧ ನಿರ್ಣಯವನ್ನು ಸಮರ್ಥನೀಯವಾಗಿಸುತ್ತದೆ. ಮಾದಕವಸ್ತು ಕಳ್ಳಸಾಗಣೆಯ ಹಾವಳಿಯನ್ನು ನಿಯಂತ್ರಿಸುವ ಉದ್ದೇಶದಿಂದ ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮವನ್ನು ಜಾರಿಗೊಳಿಸಲಾಗಿದೆ. ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮದಡಿ ಅಪರಾಧಕ್ಕೆ ಕಠಿಣ ಶಿಕ್ಷೆಯನ್ನು ಒದಗಿಸಲಾಗಿದೆ. ಮುಗ್ಧ ವ್ಯಕ್ತಿಗಳನ್ನು ದುರುದ್ದೇಶಪೂರ್ವಕವಾಗಿ ವಿಚಾರಣೆಗೆ ಒಳಪಡಿಸುವುದರಿಂದ ರಕ್ಷಿಸಲು, ಶಾಸಕಾಂಗವು ತನ್ನ ಬುದ್ಧಿವಂತಿಕೆಯಲ್ಲಿ ಕಡ್ಡಾಯವಾದ ನಿಬಂಧನೆಗಳ ರೂಪದಲ್ಲಿ ಸೂಕ್ತ ಕ್ರಮಗಳನ್ನು ಒದಗಿಸಿದೆ. ಈ ಹಂತದಲ್ಲಿ, ನಿಬಂಧನೆಗಳು ಕಠಿಣವಾದಾಗ, ಅನುಸರಣೆ ಹೆಚ್ಚು

ಕಟ್ಟುನಿಟ್ಟಾಗಿರಬೇಕು ಎಂದು ಹೇಳಬೇಕಾಗಿದೆ. ಅಂತಹ ವಿಧಾನವು ಕಟ್ಟುನಿಟ್ಟಾದ ನಿಬಂಧನೆಗಳ ದುರುಪಯೋಗವನ್ನು ಮಾತ್ರ ತಪ್ಪಿಸಬಹುದು. ಕಟ್ಟುನಿಟ್ಟಾದ ನಿಬಂಧನೆಗಳ ದುರುಪಯೋಗವನ್ನು ತಪ್ಪಿಸಲು, ವಿಶೇಷ ಶಾಸನದ ಅಡಿಯಲ್ಲಿ ಒದಗಿಸಲಾದ ಶಿಕ್ಷೆಯು ಕಠಿಣವಾದಾಗ, ಕಡ್ಡಾಯವಾದ ನಿಬಂಧನೆಗಳ ಅನುಸರಣೆಯು ಹೆಚ್ಚು ಕಠಿಣವಾಗಿರಬೇಕು ಎಂದು ಹೇಳಬಹುದು.

68. ಒಟ್ಟಾರೆ ಹೇಳುವುದಾದರೆ, ಆರೋಪಿತನು ಗಾಂಜಾವನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ ಸಲುವಾಗಿ 2 ಕೆಜಿ 220 ಗ್ರಾಂ ಗಾಂಜಾವನ್ನು ಸ್ವಾಧೀನ ಹೊಂದಿ ರೈಲುಗಾಡಿ ಸಂ. 16592 ಹಂಪಿ ಎಕ್ಸ್ ಪ್ರೆಸ್ ನ ಸಾಮಾನ್ಯ ಬೋಗಿಯಲ್ಲಿ ಮಾರಾಟ ಮಾಡುವ ಸಲುವಾಗಿ ಸಾಗಾಣಿಕೆ ಮಾಡುತ್ತಿದ್ದನು, ಆತನ ಸ್ವಾಧೀನದಿಂದ ಸದರಿ ಗಾಂಜಾವನ್ನು ಆರಕ್ಷಕರು ನಿಶಾನೆ ಪಿ- 3 ರಂತೆ ಮಹಜರು ಮುಖೇನ ಪಶಪಡಿಸಿಕೊಂಡಿರುತ್ತಾರೆ ಎನ್ನುವ ಅಂಶವನ್ನು ಅಭಿಯೋಜನೆಯ ಸಾಕ್ಷಿದಾರರು ನುಡಿದ ಸಾಕ್ಷ್ಯದಿಂದ ಸಾಬೀತಾಗಿರುವುದಿಲ್ಲ. ಅಲ್ಲದೇ, ಸದರಿ ಆರೋಪಿತನೇ ದುರುದ್ದೇಶದಿಂದ ಲಾಭ ಮಾಡುವ ಉದ್ದೇಶಕ್ಕಾಗಿ ಕಾನೂನು ಬಾಹಿರವಾಗಿ ಗಾಂಜಾವನ್ನು ಸಾರ್ವಜನಿಕರಿಗೆ ಮಾರಾಟ ಮಾಡುವುದಕ್ಕಾಗಿ ರೈಲು ಗಾಡಿಯಲ್ಲಿ ಸಾಗಾಣಿಕೆ ಮಾಡುತ್ತಿದ್ದನು, ಸದರಿ ಗಾಂಜಾವನ್ನು ಅಮಾನತ್ತುಪಡಿಸಿ ಕೊಂಡಿದ್ದಾರೆ ಎನ್ನುವ ಬಗ್ಗೆ ಸಹ ನಿರ್ಧಿಷ್ಟವಾದ ಸಾಕ್ಷ್ಯನ್ಯಾಯಾಲಯದ ಮುಂದೆ ಇರುವುದಿಲ್ಲ.

69. ಯಾವುದೇ ಅಧಿಕಾರಿಗಳು ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮದಡಿಯಲ್ಲಿ ಕ್ರಮವನ್ನು ಜರುಗಿಸಬೇಕಾದರೆ, ಶೋಧನೆ ಮಾಡುವ ಕಾಲಕ್ಕೆ ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮದಡಿ ನಮೂದು ಮಾಡಿರತಕ್ಕಂತಹ ಕಾಯ್ದೆಯ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ಆದರೆ, ಈ

ಪ್ರಕರಣದಲ್ಲಿ ತನಿಖೆಯ ಕಾಲದಲ್ಲಿ ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 50 ಮತ್ತು 52-ಎ ರಡಿಯಲ್ಲಿನ ಕಡ್ಡಾಯ ಉಪಬಂಧಗಳನ್ನು ಸಂಬಂಧಪಟ್ಟ ಆರಕ್ಷಕರು ಪಾಲಿಸದೇ ಇರುವುದು ಕಂಡುಬರುತ್ತದೆ. ಈ ಸಂದರ್ಭದಲ್ಲಿ, ಗಾಂಜಾವನ್ನು ವಶಪಡಿಸಿಕೊಳ್ಳುವಲ್ಲಿ ತನಿಖಾಧಿಕಾರಿಗಳು ಅನುಸರಿಸಬೇಕಾದ ಕಡ್ಡಾಯ ನಿಯಮಗಳನ್ನು ಅನುಸರಿಸಿರುತ್ತಾರೆ ಎಂದು ಸಾಬೀತುಪಡಿಸಲು ಅಭಿಯೋಜನೆಯು ವಿಫಲವಾಗಿದೆ. ಇದಲ್ಲದೆ, ವಶಪಡಿಸಿಕೊಂಡ ನಿಷಿದ್ಧ ಪದಾರ್ಥವನ್ನು ರಾಸಾಯನಿಕ ವಿಶ್ಲೇಷಣೆಗೆ ಸಲ್ಲಿಸುವಲ್ಲಿ ಹೆಚ್ಚಿನ ವಿಳಂಬ ಇರುವುದು ಕಂಡುಬರುತ್ತದೆ.

70. ಈ ಮೇಲೆ ಚರ್ಚಿತವಾದ ಅಂಶಗಳಿಂದ, ಈ ಪ್ರಕರಣದ ತನಿಖೆಯಲ್ಲಿ ಗಂಭೀರವಾದ ಲೋಪಗಳು ಮತ್ತು ಅಭಿಯೋಜನೆಯು ವಿಚಾರಣೆಗೊಳಪಡಿಸಿದ ಸಾಕ್ಷಿದಾರರ ಸಾಕ್ಷ್ಯವು ಅಸಂಗತತೆ, ಅಸಮಂಜಸವಾದ ಮತ್ತು ವ್ಯತಿರಿಕ್ತವಾಗಿದೆ ಹಾಗೂ ವಿರೋಧಾಭಾಸದಿಂದ ಕೂಡಿದೆ ಎಂದು ಈ ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಅದೂ ಅಲ್ಲದೇ ತನಿಖಾಧಿಕಾರಿಯವರು ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮದಡಿಯಲ್ಲಿನ ಕಡ್ಡಾಯವಾಗಿ ಪಾಲಿಸಲೇ ಬೇಕಾದಂತಹ ಪ್ರಕ್ರಿಯೆಗಳನ್ನು ಪಾಲಿಸದೇ ಇರುವುದು ಅಭಿಯೋಜನೆಯ ಪ್ರಕರಣಕ್ಕೆ ಮಾರಕವಾಗಿರುತ್ತದೆ. ಆದುದರಿಂದ, ಅಭಿಯೋಜನೆಯು ವಿಚಾರಣೆಗೊಳಪಡಿಸಿದ ಸಾಕ್ಷಿದಾರರ ಮೌಖಿಕ ಸಾಕ್ಷ್ಯ ಹಾಗೂ ಹಾಜರುಪಡಿಸಿದ ದಾಖಲಾತಿಗಳ ಸಾಕ್ಷ್ಯದಿಂದ, ದಿನಾಂಕ 28/04/2024 ರಂದು ಬೆಳಿಗ್ಗೆ ಸುಮಾರು 05-15 ಗಂಟೆ ಸಮಯದಲ್ಲಿ ರೈಲುಗಾಡಿ ಸಂಖ್ಯೆಃ 16592 ನೇಯದ್ದು ಬಳ್ಳಾರಿ ರೈಲ್ವೇ ನಿಲ್ದಾಣದ ವೇದಿಕೆ ನಂ. 1 ರಲ್ಲಿ ಬಂದು ನಿಂತಾಗ, ಸದರಿ ರೈಲಿನ ಸಾಮಾನ್ಯ ಬೋಗಿಯಲ್ಲಿ ಕುಳಿತಿದ್ದ ಆರೋಪಿತನು ಅಂದಾಜು ₹6,22,000/- ಬೆಲೆಬಾಳುವ 6 ಕೆಜಿ 220

ಗ್ರಾಂ ಗಾಂಜಾವನ್ನು ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ಸ್ವಾಧೀನದಲ್ಲಿಟ್ಟುಕೊಂಡು ಸಾಗಾಣಿಕೆ ಮಾಡಿದ್ದನು, ಸದರಿ ಗಾಂಜಾವನ್ನು ಆರಕ್ಷಕರು ನಿಶಾನೆ ಪಿ- 3 ರಂತೆ ಮಹಜರು ಮುಖೇನ ಪಶಪಡಿಸಿಕೊಂಡಿರುತ್ತಾರೆ ಎಂಬುದನ್ನು ರುಜುವಾತುಪಡಿಸಲು ನಂಬಲು ಅರ್ಹವಾಗಿರದೇ, ಸಂಶಯಾತೀತವಾದ ಮತ್ತು ಪೂರಕವಾಗುವಂತಹ ಸಾಕ್ಷ್ಯವನ್ನು ಹಾಗೂ ಸಮರ್ಥವಾದ ಪುರಾವೆಗಳನ್ನು ಇರಿಸುವ ಮೂಲಕ ಸಾಬೀತುಪಡಿಸಲು ಅಭಿಯೋಜನೆಯು ವಿಫಲವಾಗಿದೆ ಎಂದು ಈ ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಆದ್ದರಿಂದ, ಆರೋಪಿತನು ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ ಅಧಿನಿಯಮ, 1985 ರ ಕಲಂ 20(b)(ii)(B) ರಡಿಯಲ್ಲಿ ಅಪರಾಧ ಎಸಗಿದ್ದಾರೆಂದು ಆತನ ಮೇಲೆ ಹೊರಿಸಲಾಗಿರುವ ಆಪಾದನೆಗಳನ್ನು ನಿಸ್ಸಂಶಯವಾಗಿ ಸಾಬೀತುಪಡಿಸುವಲ್ಲಿ ಅಭಿಯೋಜನೆಯು ಸಂಪೂರ್ಣ ವಿಫಲಗೊಂಡಿರುತ್ತದೆ. ಆದಕಾರಣ, ಸದರಿ ಸಂಶಯದ ಲಾಭವನ್ನು ಪಡೆಯಲು ಆರೋಪಿತನು ಅರ್ಹನಿದ್ದು, ಸಂಶಯದ ಲಾಭವನ್ನು ಆರೋಪಿತನ ಪರವಾಗಿ ನೀಡಬೇಕಾಗಿರುವುದು ನ್ಯಾಯೋಚಿತ ಎಂಬ ಅಭಿಪ್ರಾಯಕ್ಕೆ ಬಂದು, ಅಂಶ 1 ಕ್ಕೆ **ನಕಾರಾತ್ಮಕ**ವಾಗಿ ಉತ್ತರಿಸಲಾಗಿದೆ.

71. **ಅಂಶ 2:-** ಅಂಶ ಒಂದರಲ್ಲಿ ನೀಡಿರುವ ಕಾರಣಗಳಿಂದ ಮತ್ತು ನ್ಯಾಯ ನಿರ್ಣಯದಂತೆ, ಈ ಕೆಳಕಂಡಂತೆ ಆದೇಶ ಮಾಡಲಾಗಿದೆಃ-

## ಆ ದೇ ಶ

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 235(1) ರ ಅಡಿಯಲ್ಲಿನ ಪ್ರದತ್ತವಾದ ಅಧಿಕಾರದ ಮುಖಾಂತರ ಆರೋಪಿತನ ವಿರುದ್ಧ ಮಾದಕ ಔಷಧಿಗಳ ಮತ್ತು ಮನೋಪರಿಣಾಮಕ ವಸ್ತುಗಳ

ಅಧಿನಿಯಮ, 1985 ರ ಕಲಂ 20(b)(ii)(B) ರಡಿಯಲ್ಲಿ ಮಾಡಲಾಗಿರುವ ಆರೋಪಣೆಗಳಿಂದ ವಿಮುಕ್ತಿಗೊಳಿಸಿ, ಆರೋಪಿತನನ್ನು ನಿರ್ದೋಷಿಯೆಂದು ತೀರ್ಮಾನಿಸಿ, ಆತನನ್ನು ಈ ಆರೋಪದಿಂದ ಖುಲಾಸೆಗೊಳಿಸಲಾಗಿದೆ.

ಆರೋಪಿತನು ಮತ್ತು ಆತನ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದುಪಡಿಸಲಾಗಿದೆ.

ಮುದ್ದೆಮಾಲು ಸಂಖ್ಯೆಃ 1 ಮತ್ತು 2 ಇವು ಮೌಲ್ಯರಹಿತವಾದ್ದರಿಂದ ಮೇಲ್ಮನವಿ ಸಮಯ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

ಮುದ್ದೆಮಾಲು ಸಂಖ್ಯೆಃ 3 ಮತ್ತು 4 ಎರಡು ಮೊಬೈಲ್ ಫೋನುಗಳು ಇವು ಮೌಲ್ಯಯುಕ್ತವಾದ್ದರಿಂದ ಇವುಗಳನ್ನು ಮೇಲ್ಮನವಿ ಸಮಯ ಮುಗಿದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಲಾಗಿದೆ.

ಮುದ್ದೆಮಾಲು ಸಂಖ್ಯೆಃ 5 ರಿಂದ 10 ಮಾದರಿ ಗಾಂಜಾ ಇವುಗಳನ್ನು ಮೇಲ್ಮನವಿ ಸಮಯ ಮುಗಿದ ನಂತರ ಮಾದಕ ವಸ್ತು ವಿಲೇವಾರಿ ಸಮಿತಿಗೆ (Drug Disposal Committee) ಕಾನೂನು ರೀತ್ಯಾ ನಾಶಪಡಿಸುವುದಕ್ಕಾಗಿ ಹಸ್ತಾಂತರಿಸಲು, ಆರಕ್ಷಕ ಉಪ-ನಿರೀಕ್ಷಕರು, ರೈಲ್ವೇ ಆರಕ್ಷಕ ಠಾಣೆ, ಬಳ್ಳಾರಿ ಇವರಿಗೆ ಹಿಂದಿರುಗಿಸಲು ಆದೇಶಿಸಿದೆ.

(ಈ ಮೇಲಿನ ಉಕ್ತಲೇಖನವನ್ನು ಶೀಘ್ರಲಿಪಿಗಾರರು ಗ್ರೇಡ್- I ಇವರಿಗೆ ನೀಡಿದ್ದು, ಇವರು ಅನುಲಿಪಿ ಮಾಡಿದ ನಂತರ ಅದನ್ನು ತಿದ್ದುಪಡಿ ಮಾಡಿ, ರುಜು ಮಾಡಿ ದಿನಾಂಕ **18 ನೇ ದಿವಸ ಸೆಪ್ಟೆಂಬರ್ ಮಾಹೆಯ 2025** ನೇ ಇಸವಿಯಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

K G SHANTHI

Digitally signed by K G SHANTHI
Location: PRINCIPAL DISTRICT AND SESSIONS JUDGE,BALLARI
Date: 2025.09.18 17:24:19 +0530

**(ಶ್ರೀಮತಿ ಕೆ.ಜಿ.ಶಾಂತಿ)**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, **ಬಳ್ಳಾರಿ.**

## ಅನುಬಂಧ

**ಅಭಿಯೋಜನೆಯ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿ:-**

| | | |
|---|---|---|
| ಪ್ರಾಸಾ- 1 | - | ಕೆ.ಎನ್. ಕರಿಯಣ್ಣ, ತಂದೆ. ನಾಗಪ್ಪ |
| ಪ್ರಾಸಾ- 2 | - | ಅಶ್ವಥ್, ತಂದೆ. ರಾಜಾ |
| ಪ್ರಾಸಾ- 3 | - | ಗುರುರಾಜ, ತಂದೆ. ಮರಿಯಪ್ಪ |
| ಪ್ರಾಸಾ- 4 | - | ಶಿವಮೂರ್ತಿ, ತಂದೆ. ಕಾಳಯ್ಯ |
| ಪ್ರಾಸಾ-5 | - | ಖಾಸೀಂ, ತಂದೆ. ಸಾಬ್ ಜಾನ್ |
| ಪ್ರಾಸಾ-6 | - | ಮುದಿಯಪ್ಪ, ತಂದೆ. ಮಲ್ಲಪ್ಪ |

**ಅಭಿಯೋಜನೆಯ ಪರ ಗುರುತಿಸಲಾದ ದಾಖಲಾತಿಗಳ ಪಟ್ಟಿ:-**

| | | |
|---|---|---|
| ನಿಶಾನೆ ಪಿ- 1 | - | ದೂರು, |
| ನಿಶಾನೆ ಪಿ-1(ಎ) | - | ಪ್ರಾಸಾ- 1 ರವರ ಸಹಿ |
| ನಿಶಾನೆ ಪಿ-1(ಬಿ) | - | ಪ್ರಾಸಾ- 6 ರವರ ಸಹಿ |
| ನಿಶಾನೆ ಪಿ- 2 | - | ಠಾಣಾ ದಿನಚರಿ, |
| ನಿಶಾನೆ ಪಿ-3 | - | ಜಪ್ತುಪಂಚನಾಮೆ, |
| ನಿಶಾನೆ ಪಿ-3(ಎ) | - | ಪ್ರಾಸಾ- 1 ರವರ ಸಹಿ |
| ನಿಶಾನೆ ಪಿ-3(ಬಿ) | - | ಪ್ರಾಸಾ- 2 ರವರ ಸಹಿ |
| ನಿಶಾನೆ ಪಿ-3(ಸಿ) | - | ಪ್ರಾಸಾ- 4 ರವರ ಸಹಿ |
| ನಿಶಾನೆ ಪಿ- 4 | - | ಪಂಚನಾಮೆ ಕಾಲಕ್ಕೆ ತೆಗೆದ ಹದಿನೈದು ಛಾಯಾಚಿತ್ರಗಳು, |
| ನಿಶಾನೆ ಪಿ- 5 | - | ಆರೋಪಿತನ ಗುರುತಿನ ಚೀಟಿ, |
| ನಿಶಾನೆ ಪಿ- 6 | - | ರೈಲ್ವೇ ಟಿಕೇಟ್, |
| ನಿಶಾನೆ ಪಿ-7 | - | ಪಂಚರಿಗೆ ನೀಡಿದ ನೋಟೀಸು, |
| ನಿಶಾನೆ ಪಿ-7(ಎ) | - | ಪ್ರಾಸಾ- 2 ರವರ ಸಹಿ |
| ನಿಶಾನೆ ಪಿ-7(ಬಿ) | - | ಪ್ರಾಸಾ- 4 ರವರ ಸಹಿ |
| ನಿಶಾನೆ ಪಿ- 8 | - | ಇನ್ವೆಂಟರಿ ಕ್ರಮ ಜರುಗಿಸಲು ತಹಶೀಲ್ದಾರ್ ಇವರಿಗೆ ನೀಡಿದ ಕೋರಿಕೆ ಪತ್ರ, |
| ನಿಶಾನೆ ಪಿ-8(ಎ) | - | ಪ್ರಾಸಾ- 3 ರವರ ಸಹಿ |
| ನಿಶಾನೆ ಪಿ- 9 | - | ಇನ್ವೆಂಟರಿ ಪಂಚನಾಮೆ, |
| ನಿಶಾನೆ ಪಿ-9(ಎ) | - | ಪ್ರಾಸಾ- 3 ರವರ ಸಹಿ |

| | | |
|---|---|---|
| ನಿಶಾನೆ ಪಿ-9(ಬಿ) | - | ಪ್ರಾಸಾ- 5 ರವರ ಸಹಿ |
| ನಿಶಾನೆ ಪಿ-9(ಸಿ) | - | ಪ್ರಾಸಾ- 6 ರವರ ಸಹಿ |
| ನಿಶಾನೆ ಪಿ- 10 | - | ತಪಶೀಲು ಪಟ್ಟಿ, ಅನೆಕ್ಷರ್- 1, 2, ಪ್ರಪತ್ರ ಮತ್ತು ಮಾದರಿ ಸೀಲು, |
| ನಿಶಾನೆ ಪಿ-10(ಎ) | - | ಪ್ರಾಸಾ- 3 ರವರ ಸಹಿ |
| ನಿಶಾನೆ ಪಿ- 11 | - | ಛಾಯಾಚಿತ್ರಗಳು, |
| ನಿಶಾನೆ ಪಿ- 12 | - | ಪ್ರಥಮ ವರ್ತಮಾನ ವರದಿ, |
| ನಿಶಾನೆ ಪಿ-12(ಎ) | - | ಪ್ರಾಸಾ- 4 ರವರ ಸಹಿ |
| ನಿಶಾನೆ ಪಿ-13 | - | ಇನ್ವೆಂಟರಿ ಜರುಗಿಸುವ ಸಮಯ ಪಂಚರಾಗಿ ಹಾಜರಿರಲು ಪಂಚರಿಗೆ ನೀಡಿದ ನೋಟೀಸು, |
| ನಿಶಾನೆ ಪಿ-13(ಎ) | - | ಪ್ರಾಸಾ- 5 ರವರ ಸಹಿ |
| ನಿಶಾನೆ ಪಿ- 14 | - | ಭಾರತೀಯ ಸಾಕ್ಷ್ಯಅಧಿನಿಯಮದ ಕಲಂ 65-ಬಿ ರಡಿಯಲ್ಲಿನ ದೃಢೀಕರಣ ಪತ್ರ, |
| ನಿಶಾನೆ ಪಿ-14(ಎ) | - | ಪ್ರಾಸಾ- 6 ರವರ ಸಹಿ |
| ನಿಶಾನೆ ಪಿ- 15 | - | ದಿನಾಂಕ 30/04/2024 ರಂದು ಬಳ್ಳಾರಿ ರೈಲ್ವೇ ನಿಲ್ದಾಣದ ಸ್ಟೇಷನ್ ಮಾಸ್ಟರ್ ಇವರಿಗೆ ಬರೆದ ಪತ್ರ, |
| ನಿಶಾನೆ ಪಿ-15(ಎ) | - | ಪ್ರಾಸಾ- 6 ರವರ ಸಹಿ |
| ನಿಶಾನೆ ಪಿ- 16 | - | ಭಾರತೀಯ ಸಾಕ್ಷ್ಯಅಧಿನಿಯಮದ ಕಲಂ 65-ಬಿ ರಡಿಯಲ್ಲಿನ ದೃಢೀಕರಣ ಪತ್ರ, |
| ನಿಶಾನೆ ಪಿ-16(ಎ) | - | ಪ್ರಾಸಾ- 6 ರವರ ಸಹಿ |
| ನಿಶಾನೆ ಪಿ- 17 | - | ವಿಧಿ ವಿಜ್ಞಾನ ಪ್ರಯೋಗಾಲಯದವರು ನೀಡಿದ ಹಿಂಬರಹ |
| ನಿಶಾನೆ ಪಿ- 18 | - | ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ |
| ನಿಶಾನೆ ಪಿ-18(ಎ) | - | ಪ್ರಾಸಾ- 6 ರವರ ಸಹಿ |

**<u>ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆ ಮಾಲುಗಳ ಪಟ್ಟಿಃ-</u>**

| | |
|---|---|
| ಮುದ್ದೆಮಾಲು ಸಂಖ್ಯೆಃ 1 | - ಆರೋಪಿತನ ಹತ್ತಿರ ಇದ್ದ ಅಮಾನತ್ತು ಪಡಿಸಿಕೊಂಡ ಬ್ಯಾಗ್, |
| ಮುದ್ದೆಮಾಲು ಸಂಖ್ಯೆ 2 | - ಗಾಂಜಾ ಸುತ್ತಿದ 6 ಕವರ್ ಗಳು, |
| ಮುದ್ದೆಮಾಲು ಸಂಖ್ಯೆಃ 3 | - ಕಪ್ಪು ಬಣ್ಣದ ಎಂ.ಐ. ರೆಡ್ಮಿ ಕಂಪನಿಯ ಮೊಬೈಲ್, |

ಮುದ್ದೆಮಾಲು ಸಂಖ್ಯೆ 4 - ಗೋಲ್ಡ್ ಕಲರಿನ ಒಪ್ಪೋ ಕಂಪನಿಯ ಮೊಬೈಲ್,

ಮುದ್ದೆಮಾಲು ಸಂಖ್ಯೆ 5 ರಿಂದ 10 - ಇನ್ವೆಂಟರಿ ಕಾಲಕ್ಕೆ ತೆಗೆದಿರಿಸಿದ ಮಾದರಿ ಗಾಂಜಾ

**ಪ್ರತಿರಕ್ಷೆ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿಃ-**

-ಇಲ್ಲ-

**ಪ್ರತಿರಕ್ಷೆ ಪರ ಗುರುತಿಸಲಾದ ದಾಖಲಾತಿಗಳ ಪಟ್ಟಿಃ-**

-ಇಲ್ಲ-

**ಪ್ರತಿರಕ್ಷೆ ಪರ ಗುರುತಿಸಲಾದ ಮುದ್ದೆಮಾಲುಗಳ ಪಟ್ಟಿಃ-**

-ಇಲ್ಲ-

K G SHANTHI

Digitally signed by K G SHANTHI
Location: PRINCIPAL DISTRICT AND SESSIONS JUDGE,BALLARI
Date: 2025.09.18 17:24:28 +0530

**(ಶ್ರೀಮತಿ ಕೆ.ಜಿ.ಶಾಂತಿ)**

ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ

ನ್ಯಾಯಾಧೀಶರು, **ಬಳ್ಳಾರಿ.**

***